


# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

Volume : 06 Issue : 292 Tuesday 09-04-2024 E-mail : maruti.b.hosamani76@gmail.com Page: 4 Price : Rs. 1/-


## ಮಹಾನ ಬಿಸಲಿಗೆ ನಲುಗಿದ ಜನ: ತಂಪು ಪಾನೀಯಗಳಿಗೆ ಮೊರೆ

**ಹುನಗುಂದ :** ಅಯ್ಯೋ... ಬಿಸಿಲು...! ಅಯ್ಯೋ... ಧಗೆ...ಧಗೆ...! ಎಂಥ ಬಿಸಿಲು... ಏನ ಝುಳವ್ವೋ...! ಯಾವಾಗದ್ರೂ ಮುಗಿಯೋತ್ತೋ ಈ ಬೇಸಿಗೆ ಎಂದು ಸಾರ್ವಜನಿಕರು ಮಹಾನ ಬಿಸಿಲಿನ ತಾಪದಿಂದ ಬಸವಳಿದು ಹೋಗಿದ್ದಾರೆ, ಬಿಸಿಲಿನ ಪ್ರಖರತೆಯು ಬೆಳಗ್ಗೆ 9 ಗಂಟೆಯಿಂದಲೇ ಮೈಯಲ್ಲಿ ಜಿಣಿಜಿಣಿ ನೀರು ಹರಿಯಲು ಪ್ರಾರಂಭಿಸಿದರೇ ಸಂಜೆ-ಯ 6 ಗಂಟೆಯವರಗೆ ಮಹಾನ ಝುಳಕ್ಕೆ ಜನರು ದಂಗ್ಗಾಗುವಂತಾಗಿದೆ. ಈ ಬಾರಿಯ ಬಿಸಿಲಿನ ತಾಪಕ್ಕೆ ತಾಲೂಕಿನ ಜನರು ತತ್ತರಿಸಿ ಹೋಗಿದ್ದಂತು ಸತ್ಯ.

ಹೌದು ಈ ಬಾರಿ ಮಳೆಯ ಅಭಾವದಿಂದ ಬಿಸಿಲಿನ ಪ್ರಖರತೆ ಹೆಚ್ಚಾಗಿ ಜನರನ್ನು ಅಸ್ತವ್ಯವಸ್ಥೆ ಗೊಳಿಸುತ್ತಿದೆ.ಬಿಸಿಲಿನ ಧಗೆ-ಯು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು. ಕಳೆದ ಎರಡು ಮೂರು ದಿನಗಳಿಂದ 39 ಡಿಗ್ರಿ ಸೆಲ್ಸಿಯಸ್ನಿಂದ 41 ಡಿಗ್ರಿ ಸೆಲ್ಸಿಯಸ್ನಷ್ಟು ಬಿಸಲಿನ ತಾಪಮಾನ ಕಾಣಿಸಿ ಕೊಳ್ಳುತ್ತಿದ್ದು. ಮೊದಲೇ ಮಳೆಯಿಲ್ಲದೇ ಭೂಮಿ ಮರಭೂಮಿ ಯಂತಾಗಿದ್ದು. ಭಯಂಕರ ಬಿಸಿಲಿಗೆ ಮತ್ತಷ್ಟು ಕಾಯಿದು ಕಬ್ಬಿದ್ದಂತಾಗಿದ್ದು ಭೂಮಿಯ ಉಷ್ಣಾಂಶದ ಪ್ರಮಾಣ ಹೆಚ್ಚಾಗಿ ಬಿಸಿ ಗಾಳಿ ಬಿಸುತ್ತಿದ್ದು. ಮನೆಯಿಂದಹೊರಬರುವಪ್ರತಿಯೊಬ್ಬರಿಗೆ ಮತ್ತುರಸ್ತೆಯ ಮೇಲೆ ಸಂಚರಿಸುವ ವಾಹನ ಸವಾರರು ಮಹಾನ ಬಿಸಿಲಿನ ತಾಪ ಮತ್ತು ಬಿಸಿ ಗಾಳಿಗೆ ಭಯಗೊಂಡು ಜನರು ಮನೆಯಿಂದ ಹೊರ ಬರಲು ಹಿಂದೇಟು ಹಾಕುತ್ತಿದ್ದಾರೆ. ಬಿಸಿಲ ತಾಪಕ್ಕೆ ಮಗು ನಳಿಯಲ್ಲಿ ಸ್ನಾನ-ರವಿವಾರ ಬಿಸಿಲಿನ ಭಯಂಕರ ಝುಳದಿಂದ ತಪ್ಪಿಸಿ ಕೊಳ್ಳಲು ಹುನಗುಂದ ಪಟ್ಟಣದ ವಿದ್ಯಾನಗರದ ಎರಡು ವರ್ಷದ ಪುಟ್ಟ ಬಾಲಕ ಮನೆಯಲ್ಲಿ ಕೆಳಗೊಂದು ಬೂಟ್ಟಿಯನ್ನು ಇಟ್ಟುಕೊಂಡು ನಳಿಯಿಂದ ನೀರನ್ನು ಪ್ರಾರಂಭಿಸಿ ಸ್ನಾನ ಮಾಡುತ್ತಿರುವ ದೃಶ್ಯ ಕಂಡು ಬಂದಿತು.





> ಮಳೆಯಿಲ್ಲದೇ ಬಿಸಿಲಿನ ಪ್ರಮಾಣ ಹೆಚ್ಚಾಗಿ ನೀರು ನೀರು ಎನ್ನುವ ಸ್ಥಿತಿ ನಿರ್ಮಾಣವಾಗಿದೆ.ಮಾರ್ಚ್ ತಿಂಗಳೊಂದರಲ್ಲಿಯೇ ಜನರು ಮಹಾನ ಬಿಸಿಲಿಗೆ ಬಾರಿ ಹೈರಾಣಾಗಿದ್ದು.ಇನ್ನು ಏಪ್ರಿಲ್ ಮೇ ತಿಂಗಳಲ್ಲಿ ಇನ್ನಷ್ಟು ಬಿಸಿಲಿನ ಪ್ರಖರತೆಗೆ ಜನರು ಮತ್ತಷ್ಟು ತ್ರಾಸ ಪಡುವ ಪರಸ್ಥಿತಿ ನಿರ್ಮಾಣವಾಗಲಿದೆ.
>
> **– ರೋಹಿತ ಬಾರಕೇರ**
> **ಅಧ್ಯಕ್ಷರು ಕರವೇ ಹುನಗುಂದ.**

> ಈ ಬಾರಿ ಬಿಸಿಲು ಹೆಚ್ಚಾಗಿರುವುದರಿಂದ ಬಿಸಿಲಿನಿಂದ ರಕ್ಷಿಸಿಕೊಳ್ಳಲು ಕಾಟನ್ ಬಟ್ಟೆಗಳನ್ನು ಧರಿಸಬೇಕು,ತಂಪು ಪಾನೀಯಗಳನ್ನು ಹೆಚ್ಚಾಗಿ ಸೇವಿಸನಬೇಕು,ಅದರಲ್ಲಿ ವಿಶೇಷವಾಗಿ ವಯೋವೃದ್ದರು, ಗರ್ಭಿಣಿಯರು,ಮಕ್ಕಳು ಹೆಚ್ಚು ಹೆಚ್ಚು ನೀರನ್ನು ಸೇವಿಸುವದರ ಜೊತೆಗೆ ತಂಪಾದ ಪ್ರದೇಶದಲ್ಲಿ ಇರುವುದು ಸೂಕ್ತ.ಕೂಲಿ ಕಾರ್ಮಿಕರು ಬೆಳಗ್ಗೆ 6 ಗಂಟೆಗೆಯಿಂದ 11 ಗಂಟೆಯವರಗೆ ಮತ್ತು ಸಾಯಂಕಾಲ 5 ಗಂಟೆಯ ಮೇಲೆ ತಮ್ಮ ದೈನಂದಿನ ಕೆಲಸಕಾರ್ಯಗಳನ್ನು ಮಾಡುವುದು ಒಳ್ಳೆಯದು.
>
> **–ಡಾ.ಸಂಗಮೇಶ ಅಂಗಡಿ ತಾಲೂಕಾ**
> **ವೈದ್ಯಾಧಿಕಾರಿ ಹುನಗುಂದ.**

ಬಿಸಿಲಿನ ಝುಳಕ್ಕೆ ಮರ ಗಿಡಗಳ ಆಶ್ರಯ-ಮಳೆಯಿಲ್ಲದೇ ಬರಗಾಲ ದಿಂದ ಒಂದೆಡೆ ಜನರು ತತ್ತರಿಸಿ ಹೋದರೇ ಇನ್ನೊಂದಡೆ ಬಿಸಿಲಿನ ಝುಳಕ್ಕೆ ಅಯೋಮಯ ಗೊಂಡ ವಯೋವೃದ್ದರು,ಚಿಕ್ಕ ಚಿಕ್ಕ ಮಕ್ಕಳ,ಮಹಿಳೆಯರು ಬಿಸಿಲಿನ ಧಗೆಗೆ ಒಂದು ಬಾಟಲ್ ನೀರನ್ನು ಹಿಡಿದು ಕೊಂಡು ಬೆಳಗ್ಗಿನಿಂದ ಸಾಯಂಕಾಲ ದವರಗೆ ಮರ ಗಿಡಿಗಳ ಆಶ್ರಯಿಸಿ ವಿಶ್ರಾಂತಿ ಪಡೆಯುವ ಪರಸ್ಥಿತಿ ಬಂದೋದಗಿದೆ.

ಜನರು ತಂಪು ಪಾನೀಯ ಕಡೆಗೆ ಮೊರೆ-ಬೆಳಗ್ಗಿನಿಂದಲೇ ಬಿಸಿಲಿನ ಧಗೆ ಆರಂಭವಾಗುತ್ತಿದ್ದಂತೆ ಅದರ ತಾಪಕ್ಕೆ ಜನರು ನೀರು ನೀರು ಎಂದು ಪರಿ ತಪಿಸುವಂತಾಗಿದೆ.ಬಿಸಿಲಿನ ತಾಪಕ್ಕೆ ಬಾಯಾರಿಕೆಯನ್ನು ಹಿಂಗಿಸಿ ಕೊಳ್ಳಲು ತಂಪು ಪಾನೀಯಗಳಾದ ಯಳನೀರು, ಕಲ್ಲಂಗಡಿ, ಮಜ್ಜಿಗೆ, ಲಸ್ಸಿ, ಕರಬೂಜ, ಶರಬತ್, ಲಿಂಬು ಸೋಡಾದಂತ ತಂಪು ಪಾನೀಯದ ಕಡೆಗೆ ಮೊರೆ ಹೋಗಿ ಬಿಸಲಿನ ತಾಪದಿಂದ ಸ್ವಲ್ಪ ಪ್ರಮಾಣದ ರಿಲ್ಯಾಕ್ಸ್ ಪಡೆಯುತ್ತಿದ್ದಾರೆ.

ಕೆಮ್ಮು ದಮ್ಮುಗಳ ರೋಗಿಗಳ ಸ್ಥಿತಿ ಅಯೋಮಯ-ದಿನದಿಂದ ದಿನಕ್ಕೆ ಬಾರಿ ಬಿಸಿಲಿನ ಪ್ರಮಾಣ ಹೆಚ್ಚಾಗಿ ಬಾರಿ ಧಗೆ,ಬಿಸಿ ಗಾಳಿಗೆ ಸಾಮಾನ್ಯ ಜನರೇ ನಡುಗುವ ಸ್ಥಿತಿ ನಿರ್ಮಾಣವಾಗಿದ್ದರೇ ಇನ್ನು ಕೆಮ್ಮು ದಮ್ಮು ಇರುವ ವಯೋವೃದ್ದರ ಸ್ಥಿತಿಯಂತೂ ಅಯೋಮಯವಾಗಿದೆ.

**ತಾಲೂಕ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಮಲ್ಲಿಕಾರ್ಜುನ. ಎಂ.ಬಂಡರಗಲ್ಲ ಹುನಗುಂದ**

## ಈ ದೇಶ ಕಟ್ಟಿದ್ದು ಕಾಂಗ್ರೆಸ್ ಪಕ್ಷ

### ಪಕೋಡಾ ಮಾರಿಸುತ್ತಿರುವುದು ಬಿಜೆಪಿ: ರಾಜು ಆಲಗೂರ



**ಹುಣಶ್ಯಾಳ :** ದೇವರ ಹಿಪ್ಪರಗಿ ತಾಲ್ಲೂಕಿನ ಹುಣಶ್ಯಾಳ ಜಿಲ್ಲಾ ಪಂಚಾಯತ ಶಕ್ತಿಕೇಂದ್ರ ವ್ಯಾಪ್ತಿಯಲ್ಲಿ ಬರುವ ಹಳ್ಳಿಗಳು ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ ಕಾಂಗ್ರೆಸ್ನ ಲೋಕಸಭೆ ಅಭ್ಯರ್ಥಿ ಪ್ರೊ.ರಾಜು ಆಲಗೂರ, 'ದೇಶವನ್ನು ಬುಡದಿಂದ ಕಟ್ಟಿದ್ದು ಕಾಂಗ್ರೆಸ್ ಪಕ್ಷ. ಆದರೆ, ದೇಶವನ್ನು ಹಾಳುಗೆಡವಿ ಪಕೋಡ ಮಾರಲು ಹಚ್ಚಿದ್ದು ಮೋದಿಯವರ ಬಿಜೆಪಿ ಎಂದು ಹೇಳಿದರು.

ನೀವೆಲ್ಲ ಸೌಖ್ಯದಿಂದ ಇರಬೇಕಾದರೆ ಕಾಂಗ್ರೆಸ್ ಪಕ್ಷ ಕೇಂದ್ರದಲ್ಲಿ ಅಧಿಕಾರಕ್ಕೆ ಬರಬೇಕು. ಜನರ ಜೀವನ ಸುಧಾರಿಸಬೇಕಾದರೆ ನಮ್ಮ ಪಕ್ಷಕ್ಕೆ ಮತ ನೀಡಿ. ರಾಜ್ಯ ಸರಕಾರ ನೀಡಿದ್ದ ಭರವಸೆಗಳೆಲ್ಲ ಈಡೇರಿಸಿದೆ. ನಮಗೆ ಓಟು ಕೇಳಲು ನೈತಿಕತೆ ಇದೆ. ಬಿಜೆಪಿಯವರ ಸುಳ್ಳಿನ ಮಾತಗಳನ್ನು ನಂಬಬೇಡಿ. ರಮೇಶ ಜಿಗಜಿಣಗಿಯವರು ಮೂವತ್ತು ವರ್ಷ ಲೋಕಸಭೆ ಸದಸ್ಯರಾಗಿ ಏನು ಮಾಡಿದ್ದಾರೆ ಹೇಳಿ. ಹಾಗಾಗಿ ಇದು ಬದಲಾವಣೆಯ ಸಮಯ. ಅವರನ್ನು ಬದಲಿಸಿ, ನಮಗೆ ಬೆಂಬಲಿಸಿ ಎಂದು ವಿನಂತಿಸಿದರು. ಮಾಜಿ ಶಾಸಕರಾದ ಶರಣಪ್ಪ ಸುಣಗಾರ, ನುಡಿದಂತೆ ನಡೆದದ್ದು ಹಾಗೂ ಮುಂದೆಯೂ ನಡೆಯುವುದು ಕಾಂಗ್ರೆಸ್ ಎಂದರು ಬಡವರು ಬಳಸುವ ಆಹಾರ ಧಾನ್ಯಗಳ ಬೆಲೆ ಗಮನಕ್ಕೆ ಏರಿದೆ ಹಾಗೂ ಡೀಸಲ್, ಪೆಟ್ರೋಲ್ ಅಡಿಗೆಅನಿಲ ಹಾಗೂ ಇನ್ನೂ ಮುಂತಾದ ವಸ್ತು ಗಳು ಬೆಲೆ ಏರಿಕೆ ಅಗಿದೆ ಈ ಬಿಜೆಪಿ ಸರ್ಕಾರ ಬೇಗನೆ ಕಿತ್ತಿ ವಗೆಯಬೇಕು ಎಂದು ಹೇಳಿದರು ಹಾಗೂ ಬಿ.ಎಸ್. ಪಾಟೀಲ ಯಾಳಗಿ, ಡಾ.ಪ್ರಭುಗೌಡ ಲಿಂಗದಳ್ಳಿ, ಆನಂದಗೌಡ ದೊಡ್ಡಮನಿ, ಬಶೀರ್ ಶೇಟ.ಬೇಪಾರಿ ಇವರೂ ಕೂಡಾ ಮಾತನಾಡಿದರು, ಈ ಪ್ರಚಾರ ಕಾರ್ಯಕ್ರಮದಲ್ಲಿ ಸುಭಾಷ್ ಛಾಯಾಗೋಳ ,ಗೌರಮ್ಮ ಮುತ್ತತ್ತಿ, ಲಲಿತಾ ದೊಡ್ಡಮನಿ, ಸರಿತಾ ನಾಯಕ, ರಮೀಜಾ ನದಾಫ್, ಬಶೀರ್ ಬೇಪಾರಿ, ಬಾಳಾಸಾಹೇಬ ಪಾಟೀಲ, ಬಾಪುಗೌಡ ಪಾಟೀಲ, ಸಂಗನಗೌಡ ಪಾಟೀಲ, ಸಾಹೇಬಗೌಡ ಬಿರಾದಾರ, ಪರಶುರಾಮ ದಿಂಡವಾರ, ರಮೇಶ ಗುಬ್ಬೇವಾಡ,ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

**ತಾಲೂಕ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್ : ಭೀಮಪ್ಪ.ಹಚ್ಯಾಳ ದೇವರ ಹಿಪ್ಪರಗಿ.**

## ಸಮಾನತೆಯ ಸಂದೇಶವನ್ನು ಸಾರಿದವರು ತಿಂಥಣಿ ಮೌನೇಶ್ವರರು



**ರಬಕವಿ-ಬನಹಟ್ಟಿ :** ತಿಂಥಣಿ ಮೌನೇಶ್ವರರು ಹಿಂದೂ ಮುಸ್ಲಿಂರ ಬಾಂಧವ್ಯಕ್ಕೆ ಶ್ರಮಿಸಿದ ಭಾವೈಕ್ಯತೆಯ ಹರಿಕಾರರಾಗಿದ್ದರು. ಅವರು ಕೇವಲ ಲೀಲಾ ಪುರಷರಾಗಿರದೆ ಕ್ರಾಂತಿ-ಕಾರಕ ವಚನಗಳನ್ನು ರಚಿಸುವುದರ ಜೊತೆಗೆ ಸಮಾನತೆಯನ್ನು ಸಾರಿದವರಾಗಿದ್ದರು ಎಂದು ನವಲಗುಂದದ ಅಜಾತ ನಾಗಲಿಂಗ ಮಠದ ವೀರೇಂದ್ರ ಸ್ವಾಮೀಜಿ ನುಡಿದರು.

ಬುಧವಾರ ಇಲ್ಲಿನ ಬನಹಟ್ಟಿಯ ಅಕ್ಕಲಕೋಟ ಶರಣರು ಸ್ಥಾಪಿಸಿದ ಸಿದ್ಧಾರೂಢ ಮಠದಲ್ಲಿ ತಿಂಥಣಿ ಮೌನೇಶ್ವರ ಚರಿತ್ರೆಯ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು.

ಬಸವಣ್ಣನವರಂತೆ ಅವರು ಕೂಡಾ ಕಾಯಕಕ್ಕೆ ಹೆಚ್ಚು ಮಹತ್ವ ನೀಡಿದ್ದರು. ಯಾವುದೇ ಮಹಾತ್ಮರನ್ನು ಜಾತಿಯಿಂದ ಅವರನ್ನು ಗುರುತಿಸದೆ ಅವರು ಸಮಾಜಕ್ಕೆ ನೀಡಿದ ಸಂದೇಶಗಳ ಬಗ್ಗೆ ಗಮನ ನೀಡಬೇಕು.

ಕಷ್ಟದಲ್ಲಿಯೂ ಕೂಡಾ ಆನಂದವನ್ನು ಕಂಡುಕೊಂಡವರು ಭಾರತೀಯರು. ಅದಕ್ಕಾಗಿ ಅವರು ಅಧ್ಯಾತ್ಮವನ್ನು ಸಾಧಿಸಲು ಸಾಧ್ಯವಾಯಿತು ಎಂದು ವೀರೇಂದ್ರ ಸ್ವಾಮೀಜಿ ತಿಳಿಸಿದರು.

ರಾಮಣ್ಣ ಭದ್ರನವರ, ಮಲ್ಲೇಶಪ್ಪ ಕುಚನೂರ, ಕಲ್ಲಪ್ಪ ಪತ್ತಾರ, ವೈ. ಬಿ. ಕೊರಡೂರ, ರಮೇಶ ಸೋರಗಾಂವಿ, ಮೋಹನ ಪತ್ತಾರ, ರಮೇಶ ಕೊಣ್ಣೂರ, ಪ್ರಕಾಶ ಬುರುಡ, ಶೈಲಜಾ ನುಚ್ಚಿ, ಸಚದೇವಿ ಸುಟ್ಟಟ್ಟಿ, ಚಿದಾನಂದ ಪತ್ತಾರ, ಉಮಾ ಬಡೇಮಿ, ಲಲಿತಾ ಪತ್ತಾರ ಭಾರತಿ ಆಸಂಗಿ, ಕಲಾ ಪತ್ತಾರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ಹಲಗೇರಿಯಲ್ಲಿ ಇಂದು ಶಾಸಕ ಹಿಟ್ನಾಳ ನೇತೃತ್ವದಲ್ಲಿ ಕಾಂಗ್ರೆಸ್ ಪ್ರಚಾರ



**ಕೊಪ್ಪಳ :** ಬರುವ ಮೇ ಯೋಳರಂದು ಜರುಗಲಿರುವ ಕೊಪ್ಪಳ ಲೋಕಸಭಾ ಕ್ಷೇತ್ರದ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಲಿರುವ ಕೆ ರಾಜಶೇಖರ್ ಹಿಟ್ನಾಳ ಪರ ತಾಲೂಕಿನ ಹಲಗೇರಿ ಗ್ರಾಮ ದಲ್ಲಿ ರವಿವಾರ ಬೆಳಿಗ್ಗೆ ಶಾಸಕ ಕೆ ರಾಘವೇಂದ್ರ ಹಿಟ್ ರವರ ನೇತೃತ್ವದಲ್ಲಿ ಬಹಿರಂಗ ಪ್ರಚಾರ ಕಾರ್ಯಕ್ರಮ ನಡೆಯಲಿದೆ ಎಂದು ಗುಡದಪ್ಪ ಬಾನಪ್ಪ ನವರ ಹಲಿಗೇರಿ ತಿಳಿಸಿದ್ದಾರೆ.

ಈ ಕುರಿತು ಹೇಳಿಕೆ ನೀಡಿದ ಅವರು ಈ ಬಾರಿ ಕಾಂಗ್ರೆಸ್ ಅಭ್ಯರ್ಥಿ ಗೆಲ್ಲಲು ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ಐದು ಗ್ಯಾರಂಟಿ ಯೋಜನೆಗಳು ಮತ್ತು ಸ್ಥಳೀಯ ಶಾಸಕರ ಜನಪರ ಯೋಜನೆಗಳು ಈ ಬಾರಿ ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಗೆಲುವಿಗೆ ಶ್ರೀರಕ್ಷೆಯಾಗಲಿದೆ ಎಂದು ಗುಡದಪ್ಪ ಬಾನಪ್ಪನವರ ಹಲಗೇರಿ ತಿಳಿಸಿದ್ದಾರೆ.

## ನವೋದಯ ಶಾಲೆಗೆ ಸಾಗರ ಮೇಟಿ ಆಯ್ಕೆ



**ಬೀಳಗಿ :** ತಾಲೂಕಿನ ಕಾತರಕಿ ಗ್ರಾಮದ ಸರಕಾರಿ ಹಿರಿಯ ಪ್ರಾಥ-ಮಿಕ ಶಾಲೆಯ ವಿದ್ಯಾರ್ಥಿ ಸಾಗರ ಸದಾಶಿವ ಮೇಟಿ ಜವಾಹರ ನವೋದಯ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ನವೋದಯ ಶಾಲೆಗೆ ಆಯ್ಕೆಯಾಗಿದ್ದಾರೆ.

ಎಸ್‌ಡಿಎಂಸಿ ಅಧ್ಯಕ್ಷರು, ಉಪಾಧ್ಯಕ್ಷರು, ಪದಾಧಿಕಾರಿಗಳು, ಮುಖ್ಯೋಪಾಧ್ಯಾಯರು ಹಾಗೂ ಸಿಬ್ಬಂದಿ ವರ್ಗದವರು ಹರ್ಷ ವ್ಯಕ್ತಪಡಿಸಿದ್ದಾರೆ.

## ಮತದಾನದಲ್ಲಿ ಪ್ರತಿಯೊಬ್ಬರೂ ಕಡ್ಡಾಯವಾಗಿ ಪಾಲ್ಗೊಳ್ಳಿ



**ರಬಕವಿ-ಬನಹಟ್ಟಿ :** ಸಂವಿಧಾನ ಭಾರತೀಯ ಪ್ರಜೆಗಳಿಗೆ ಮತದಾನದ ಹಕ್ಕನ್ನು ನೀಡಿದೆ. ಪ್ರತಿಯೊಂದು ಸಾರ್ವಜನಿಕ ಚುನಾವಣೆಯಲ್ಲಿ ಪ್ರತಿಯೊಬ್ಬರೂ ಮತದಾನದಲ್ಲಿ ಪಾಲ್ಗೊಳ್ಳಬೇಕು. ಮತದಾನ ಪವಿತ್ರವಾದ ಕರ್ತವ್ಯವಾಗಿದೆ. ಹದಿನೆಂಟು ವರ್ಷ ಮೇಲ್ಪಟ್ಟ ಪ್ರತಿಯೊಬ್ಬರು ಮತದಾನದಲ್ಲಿ ಭಾಗವಹಿಸಬೇಕು ಎಂದು ರಬಕವಿ ಬನಹಟ್ಟಿ ನಗರಸಭೆಯ ಪೌರಾಯುಕ್ತ ಜಗದೀಶ ಈಟಿ ತಿಳಿಸಿದರು.

ಅವರು ನಗರದಲ್ಲಿ ತಹಶೀಲ್ದಾರ್ ಕಾರ್ಯಾಲಯ, ರಬಕವಿ ಬನಹಟ್ಟಿ ತಾಲ್ಲೂಕು ಪಂಚಾಯ್ತಿ ಮತ್ತು ನಗರಸಭೆಯ ಆಶ್ರಯದಲ್ಲಿ ಹಮ್ಮಿಕೊಳ್ಳಲಾದ ಮತದಾನ ಜಾಗೃತಿ ಜಾಥಾಕ್ಕೆ ಚಾಲನೆ ನೀಡಿ ಮಾತನಾಡಿದರು.

ಮತದಾನದ ದಿನದಂದು ಯಾವುದೇ ಆಸೆ ಆಮಿಷಗಳಿಗೆ ಒಳಗಾಗದೆ ಯೋಗ್ಯವಾದ ಅಭ್ಯರ್ಥಿಗೆ ಮತ ನೀಡುವುದರ ಮೂಲಕ ನಾವು ನಮ್ಮ ಹಕ್ಕನ್ನು ಚಲಾಯಿಸಬೇಕು. ಮತದಾನದ ಜಾಗೃತಿಯಲ್ಲಿ ಯುವಕರ ಪಾತ್ರ ಬಹಳಷ್ಟು ಮುಖ್ಯವಾಗಿದೆ. ಯುವಕರು ತಾವು ಮತ ಚಲಾಯಿಸುವುದರ ಜೊತೆಗೆ ತಮ್ಮ ನೆರೆ ಹೊರೆಯವರಿಗೂ ಮತದಾನದಲ್ಲಿ ಭಾಗವಹಿಸುವಂತೆ ತಿಳಿಸಬೇಕು ಎಂದು ಜಗದೀಶ ಈಟಿ ತಿಳಿಸಿದರು.

ಈ ಸಂದರ್ಭದಲ್ಲಿ ನಗರಸಭೆಯ ಪೌರ ಕಾರ್ಮಿಕರು ನಗರದ ಪ್ರಮುಖ ಬೀದಿಗಳಲ್ಲಿ ಮತದಾನ ಜಾಗೃತಿಯ ಭಿತ್ತಿ ಪತ್ರಗಳನ್ನು ಪ್ರದರ್ಶನ ಮಾಡಿದರು.

ರಾಘವೇಂದ್ರ ಕುಲಕರ್ಣಿ, ಶೋಭಾ ಹೊಸಮನಿ, ವಸಂತ ಪವಾರ, ಭೀಮು ಬಾಡಗಿ, ಬಿ. ಎಸ್. ಮಠದ, ಎಂ. ಬಿ. ಮೊಕಾಶಿ, ಬಿ. ಎಸ್. ಹೊಸೂರ, ಪ್ರಕಾಶ ಮಠಪತಿ ಸೇರಿದಂತೆ ರಬಕವಿ ಬನಹಟ್ಟಿ ತಹಶೀಲ್ದಾರ್, ತಾಲ್ಲೂಕು ಪಂಚಾಯ್ತಿ ಕಾರ್ಯಾಲಯ ಹಾಗೂ ನಗರಸಭೆ ಕಾರ್ಯಾಲಯದ ಅಧಿಕಾರಿಗಳು ಉಪಸ್ಥಿತರಿದ್ದರು.

## ಹಸಿರೆಲೆಗಳ ಚಿಗರೊಡೆಯುವ ದಿನ ಯುಗಾದಿ.....

ಸದಾ ತಿರುಗುತ್ತಿರುವ ಕಾಲಚಕ್ರದ ನಡುವಿನ ನಮ್ಮ ಜೀವನದಲ್ಲಿ ಅಮೂಲ್ಯ ಕ್ಷಣಗಳು ಕಳೆದು ಹೋಗುತ್ತಿದ್ದರೂ ಮತ್ತೆ ನೂತನ ಕಾಲವು ನಮಗೆ ಒದಗಿ ಬರುತ್ತಾ ಹೊಸ ಹೊಸ ಅವಕಾಶಗಳು ನಮಗಾಗಿ ಬಾಗಿಲು ತೆರೆಯುತ್ತಲಿರುತ್ತವೆ. ಹಾಗಾಗಿ ಕಳೆದ ಹೋದ ಕಾಲವು ನಮ್ಮಿಂದ ಕೆಲವೊಂದು ಕಸಿದುಕೊಂಡರೂ ಹೊಸ ಹೊಸ ಭರವಸೆಯನ್ನು ತರುವುದು ಸುಳ್ಳಲ್ಲ. ಇಂತಹ ಕಾಲದ ಸಂದೇಶವನ್ನು ನೀಡುವ ಕಾಲದ ಹಬ್ಬ ನಮ್ಮ ಯುಗಾದಿ.

ಪಕ್ಷಿಗಳಲ್ಲಿ ನವಿಲು, ಪ್ರಾಣಿಗಳಲ್ಲಿ ಮಾನವ, ಋತುಗಳಲ್ಲಿ ವಸಂತ ಋತು ಶ್ರೇಷ್ಠವಾದಂತೆ ಎಲ್ಲ ಹಬ್ಬಗಳಲ್ಲಿ ಯುಗಾದಿಯು ಶ್ರೇಷ್ಠ. ಈ ಹಬ್ಬವನ್ನು ಭಾರತ ಪರ್ವದಲ್ಲಿ ಬೇರೆ ಬೇರೆ ಹೆಸರಿನಿಂದ, ಸಾಮಾನ್ಯವಾಗಿ ಎಲ್ಲರೂ ಆಚರಿಸುವರು ಹಬ್ಬಗಳಲ್ಲಿ ಶ್ರೇಷ್ಠವಾದ ಪ್ರಸಿದ್ಧವಾದ ಯುಗಾದಿ ಹಬ್ಬ ಚೈತ್ರ ಮಾಸದ ಶುಕ್ಲ ಪಕ್ಷದ ಪಾಡ್ಯದಂದು ಬರುತ್ತದೆ. ಯುಗಾದಿ ಹಬ್ಬ ಹಿಂದುಗಳ ದೃಷ್ಟಿಯಲ್ಲಿ ವರ್ಷಾರಂಭದ ಪವಿತ್ರ ದಿನ. ಹೊಸ ವರ್ಷದ ಪ್ರಾರಂಭದ ಸಂಕೇತವಾದ ಯುಗಾದಿಯನ್ನು ಬಡವ – ಬಲ್ಲಿದರೆಂಬ ತಾರತಮ್ಯವಿಲ್ಲದೇ ಎಲ್ಲಾ ಹಿಂದುಗಳು ಆಚರಿಸುತ್ತಾರೆ. ರೈತರು ಎತ್ತುಗಳನ್ನು ಶೃಂಗರಿಸಿ ಸಂಭ್ರಮದಿಂದ ಹಬ್ಬವನ್ನು ಆಚರಿಸುತ್ತಾರೆ. ವ್ಯಾಪಾರಿಗಳು ಹಾಗೂ ಇನ್ನಿತರರು ಕೂಡ ಅಂದಿನ ದಿನವೇ ಶುಭ ಕಾರ್ಯವನ್ನು ಮಾಡುತ್ತಾರೆ.

'ಯುಗಾದಿ' ಬಂದಿತೆಂದರೆ ಎಲ್ಲೆಡೆಯಲ್ಲಿ ಸಂತೋಷ, ಸಂಭ್ರಮ ತುಂಬಿ ತುಳುಕುತ್ತಿರುತ್ತದೆ. ಚೈತ್ರ ಮಾಸದಿಂದ ವಸಂತ ಋತು ಶುರುವಾಗುತ್ತದೆ. ವನಗಳೆಲ್ಲ ಚಿಗುರಿ ಹೂ ಬಿಟ್ಟು ಯುಗಾದಿಯ ಹರ್ಷವನ್ನು ಬೀರುವವು. ಎಲ್ಲಿ ನೋಡಿ-ದರೂ ಮರ ಗಿಡ ಬಳ್ಳಿಗಳು ಹಸಿರಾಗಿ ನಳನಳಿಸುತ್ತಿರುವುದು.

ಯುಗಾದಿಯ ದಿನ ಮುಂಜಾನೆ ಬೇವು ಮಿಶ್ರಿತ ನೀರಿನಿಂದ ಸ್ನಾನ ಮಾಡಿ, ಹೊಸ ಬಟ್ಟೆ ಧರಿಸಿ ದೇವಸ್ಥಾನಕ್ಕೆ ಹೋಗಿ ದೇವರನ್ನು ಪೂಜಿಸಿ, ಬೇವು ಬೆಲ್ಲವನ್ನು ಸೇವನೆ ಮಾಡುತ್ತಾರೆ. ಬೇವು- ಬೆಲ್ಲವು ಸುಖ – ದುಃಖ, ರಾತ್ರಿ- ಹಗಲು,ಇವುಗಳ ಸಂಕೇತಗಳಾಗಿವೆ. ಮಾನವರ ಬದುಕಿನಲ್ಲಿ ಸುಖ ದುಃಖಗಳು ಅವಿಭಾಜ್ಯ ಅಂಶಗಳು. ಇವೆಲ್ಲವುಗಳೊಂದಿಗೆ ಸಮತೋಲನ ಕಾಯ್ದುಕೊಂಡು ಮನುಷ್ಯ ಬದುಕಬೇಕು. ಜೀವನದಲ್ಲಿ ಕಷ್ಟ- ಸುಖ ನೋವು – ನಲಿವುಗಳ ಸಮ್ಮಿಶ್ರಣವಾಗಿವೆ. ಇವೆರಡೂ ಒಟ್ಟಿಗೆ ಇರುವವು. ಎರಡನ್ನೂ ಸಮದೃಷ್ಟಿಯಿಂದ ಸವಿಯುವುದನ್ನು ಕಲಿಯಲೆಂದೇ ಯುಗಾದಿಯಂದು ಬೇವು – ಬೆಲ್ಲವನ್ನು ತಿನ್ನಿಸುವರು.

ಕಲಿಯುಗದ ಅಂಧಕಾರದ ರಾತ್ರಿಯನ್ನು ಸತ್ಯಯುಗದ ಸುಜ್ಞಾನದ ಬೆಳಕನ್ನಾಗಿ ಪರಿವರ್ತಿಸುವ ಉದಯ ಕಾಲವೇ ಯುಗಾದಿ. ಯುಗಾದಿಯು ನಾಡಿಗೆ ಮಾತ್ರವಲ್ಲದೆ, ಇಡೀ ವಿಶ್ವಕ್ಕೆ ಉಜ್ವಲತೆಯನ್ನು, ಜನತೆಗೆ ಸುಖ ಶಾಂತಿಯನ್ನು ನೀಡುವ ವಜ್ರಸಮಾನ ಸಮಯ. ಯುಗಾದಿಯು ಪ್ರಕೃತಿ ಮಾತೆಯ ಪುನರುತ್ಥಾನದ ದಿನವನ್ನು ಸೂಚಿಸುತ್ತದೆ. ವಸಂತ ಕಾಲ ಸಮೀಪಿಸುತ್ತಿದ್ದಂತೆ, ಹೊಸ ಸಸ್ಯಗಳು ಮತ್ತು ಎಲೆಗಳು ಭೂಮಿಯನ್ನು ಹಸಿರಿನಿಂದ ಆವರಿಸಿಕೊಳ್ಳುತ್ತವೆ. ಯುಗಾದಿಯು ಚಳಿಗಾಲದ ಕಠೋರವಾದ ಚಳಿಯ ನಂತರ ವಸಂತಕಾಲದ ಆರಂಭ ಮತ್ತು ಸೌಮ್ಯವಾದ ಹವಾಮಾನವನ್ನು ಸೂಚಿಸುವ ಹಬ್ಬವಾಗಿದೆ. ಇದು ವಸಂತ ಋತುವನ್ನು ಸ್ವಾಗತಿಸಲು ಆಚರಿಸುವ ಹಬ್ಬವೂ ಹೌದು. ಯುಗಾದಿ ಹಬ್ಬವು ನಮಗೆ ಬಂದಿದ್ದನ್ನೆಲ್ಲ ಸ್ವೀಕರಿಸಿ ಒಳ್ಳೆಯ ಮತ್ತು ಕೆಟ್ಟದ್ದನ್ನು ಸಕಾರಾತ್ಮಕ ಮನೋಭಾವದಿಂದ ಎದುರಿಸುವ ಸರಳ ಸಂದೇಶವನ್ನು ನೀಡುತ್ತದೆ.



ಈ ಹಬ್ಬದ ದಿನದಂದು ಜನರು ತಮ್ಮ ಮನೆಗಳ ಪ್ರವೇಶದ್ವಾರವನ್ನು ಮಾವಿನ ಎಲೆಗಳು ಮತ್ತು ರಂಗೋಲಿಯಿಂದ ಅಲಂಕರಿಸುತ್ತಾರೆ. ಯುಗಾದಿಯಂದು ಜನರು ಉತ್ತಮ ಆರೋಗ್ಯ ಮತ್ತು ಸಮೃದ್ಧಿಗಾಗಿ ದೇವರನ್ನು ಪ್ರಾರ್ಥಿಸುತ್ತಾರೆ. ಇದಲ್ಲದೆ ಜನರು ಬೆಲ್ಲ ಮತ್ತು ಬೇವಿನ ಎಲೆಗಳನ್ನು ಸಮಾನ ಪ್ರಮಾಣದಲ್ಲಿ ಹಂಚುತ್ತಾರೆ, ಅಂ-ದು ದೇವರು ಮತ್ತು ಕುಟುಂಬದ ಹಿರಿಯ-ರಿಂದ ಆಶೀರ್ವಾದವನ್ನು ಪಡೆಯುತ್ತಾ-ರೆ. ಬೆಲ್ಲ ಮತ್ತು ಬೇವಿನ ಎಲೆಗಳನ್ನು ಹಂಚಿಕೊಳ್ಳುವುದು ಜೀವನದ ಒಳ್ಳೆಯ ಮತ್ತು ಕೆಟ್ಟ ಹಂತಗಳನ್ನು ಸಮಾನವಾಗಿ ಸ್ವೀಕರಿಸುವ ಸಂಕೇತವಾಗಿದೆ.

ಹಿಂದೂಗಳ ಪವಿತ್ರ ಹಬ್ಬ ಚಂದ್ರಮಾನ ಯುಗಾದಿಯ ಶುಭ ಸಂದರ್ಭದಲ್ಲಿ ಪ್ರಕೃತಿಯ ಬದಲಾವಣೆಯ ಸಂದರ್ಭದಲ್ಲಿ ಬೇವು- ಬೆಲ್ಲ ಸವಿಯುವ ಮೂಲಕ ನಾಡಿಗೆ ಕಾಲಕಾಲಕ್ಕೆ ತಕ್ಕಂತೆ ಮಳೆ-ಬೆಳೆ ಆಗಲಿ. ಸಾಕಷ್ಟು ಉತ್ಸಾಹ, ಸಂಭ್ರಮ, ಸಡಗರದಿಂದ ನೂತನ ವರ್ಷದಲ್ಲಿ ಸಂತೋಷ, ನೆಮ್ಮದಿ, ಅಭಿವೃದ್ಧಿ ನಮ್ಮದಾಗಲಿ. ವರ್ಷ ಪೂರ್ತಿ ಹರುಷ ತುಂಬಿರಲಿ, ಬೇವು ಬೆಲ್ಲದಂತೆ ಎಲ್ಲರ ಜೀವನದಲ್ಲೂ ಸಿಹಿ ಕಹಿ ಇರುವುದು ಸಾಮಾನ್ಯ ಆದರೆ ನಮ್ಮ ಬಾಳಲ್ಲಿ ಬೇವಿನ ಕಹಿಗಿಂತ ಬೆಲ್ಲದ ಸಿಹಿಯೇ ಹೆಚ್ಚಿರಲಿ ಸುಖ, ಸಮೃದ್ಧಿ, ಶಾಂತಿ, ಸೌಹಾರ್ದತೆ ನಮ್ಮ ಜೀವನದಲ್ಲಿ ಹಾಲಿನಂತೆ ಉಕ್ಕಲಿ.

ಹಿಂದಿನ ಕಹಿ ಘಟನೆಗಳನ್ನು ಮರೆತು, ಹೊಸ ಭರವಸೆ, ಆಶಾವಾದದಿಂದ ಮುಂದೆ ನೋಡುವ ಸಮಯ ಇದು. ಬದುಕು ಎಂದ ಮೇಲೆ ಸಿಹಿ, ಕಹಿಗಳು ಸಾಮಾನ್ಯ, ಬೇವು ಬೆಲ್ಲದ ಸಮ್ಮಿಳಿತವೇ ನಮ್ಮ ಜೀವನ. ಸಿಹಿಗೆ ಹಿಗ್ಗದೆ, ಕಹಿಗೆ ಜಗ್ಗದೆ ಬದುಕು ಮುನ್ನಡೆಸೋಣ.

ಸರ್ವರಿಗೂ ಯುಗಾದಿ ಹಬ್ಬದ ಶುಭಾಶಯಗಳು.

– ಕು. ಜ್ಯೋತಿ ಆನಂದ ಚಂದುಕರ
ಬಾಗಲಕೋಟ

# ಮಳೆ-ಗಾಳಿಯಿಂದ ನಷ್ಟಗೊಂಡ ಲಿಂಬೆ ರೈತರು





**ವಿಜಯಪುರ :** ಸುರಿದ ಮಳೆ ಹಾಗೂ ವಿಪರಿತ್ ಗಾಳಿಯಿಂದ ಜಿಲ್ಲೆಯಲ್ಲಿ ಸಾಕಷ್ಟು ನಷ್ಟವಾಗಿದೆ, ಸವಿೀಪದ ಜಂಬಗಿ(ಆ) ಗ್ರಾಮದಲ್ಲಿ ಸುಮಾರು 50 ಕ್ಕೂ ಹೆಚ್ಚು ರೈತರಜಮೀನಿನಲ್ಲಿ ಲಿಂಬೆ ಗಿಡಗಳು ಬುಡ ಸಮೇತಕಿತ್ತು ಬಿದ್ದುನಷ್ಟಗೊಂಡ ನಡೆದಿದೆ.
ಬರಗಾಲದಿಂದ ಇರುವ ಅಲ್ಪ ಸ್ವಲ್ಪ ನೀರು ಸಾಲದೇಟ್ಯಾಂಕರ್ ಮೂಲಕ ಹೆಚ್ಚಿನ ಹಣಕೊಟ್ಟು ನೀರು ಹಾಕಿಸಿಕೊಂಡು ಲಿಂಬೆ ಗಿಡವನ್ನುಕಾಪಾಡಿಕೊಂಡು ಬಂದಿರುವರೈತರಿಗೆ ನಿನ್ನೆಯ ದಿನ ಬೆಳಗಾಗುವುದರೊಳಗೆ ಎಲ್ಲಾ ಲಿಂಬೆ ಗಿಡಗಳು ಗಾಳಿಯಿಂದ ನೆಲಕ್ಕೆ ಉರುಳಿರುವುದನ್ನು ನೋಡಿ ದಿಕ್ಕು ತೋಚದಂತಾಗಿತಲೆ ಮೇಲೆ ಕೈಹೊತ್ತು ಕುಳಿತುಕೊಳ್ಳುವಂತಾಗಿದೆ, ಬೆಳಿಗ್ಗೆ ರೈತರುಕರೆ ಮಾಡಿದಾಗಕರ್ನಾಟಕರಾಜ್ಯರೈತ ಸಂಘ ಹಾಗೂ ಹಸಿರು ಸೇನೆಯ ವತಿಯಿಂದ ನಷ್ಗೊಂಡರೈತರ ಹೊಲಕ್ಕೆ ಬೇಟಿ ನೀಡಿ ಸರಕಾರಕ್ಕೆ ಪರಿಹಾರಕ್ಕಾಗಿ ಒತ್ತಾಯಿಸಲಾಗುವುದು ಎಂದು ವಿಜಯಪುರ ತಾಲೂಕಾ ಉಪಾಧ್ಯಕ್ಷರಾದ ಮಹಾದೇವಪ್ಪ ತೇಲಿ ಹೇಳಿದರು.
ಲಿಂಬೆಗೆ ಬೇಸಿಗೆಯಲ್ಲಿ ಒಳ್ಳೆಯ ಬೆಲೆ ಬರುವ ವೇಳೆಯಲ್ಲಿ ಈ ರೀತಿಅವಘಡಕ್ಕೆ ಸಿಲುಕಿ ಈ ಭಾಗದ ಹಲವಾರುರೈತರಿಗೆ ನಷ್ಟವಾಗಿದೆ, ಕೂಡಲೇ ಜಿಲ್ಲಾಡಳಿತ ಹಾಗೂ ತೋಟಗಾರಿಕೆ ಇಲಾಖೆ ನಷ್ಟಗೊಂಡರೈತರಿಗೆ ಪರಿಹಾರ ನೀಡಬೇಕು, ಇಂದು ರವಿವಾರ ಇರುವುದರಿಂದ ಎಲ್ಲಾ ಅಧಿಕಾರಿಗಳಿಗೆ ಕರೆ ಮಾಡಿದರೆ ಯಾರು ಕರೆ ಸ್ವೀಕರಿಸಲಿಲ್ಲ ಎಂದರು.
ಸಂಗಮೇಶ ಸಗರ, ಜಿಲ್ಲಾಧ್ಯಕ್ಷರು, ವಿಜಯಪುರ ನಿನ್ನೆರಾತ್ರಿ ಸುರಿದ ಮಳೆ ಹಾಗೂ ವಿಪರೀತ ಗಾಳಿಯಿಂದಾಗಿ ಲಿಂಬೆ, ಬಾಳೆ, ಟೆಂಗಿನ ಗಿಡಗಳು ನೆಲಕ್ಕೆ ಉರುಳಿ ಸಾಕಷ್ಟು ನಷ್ಟ ಉಂಟಾಗಿರುವುದು ತಿಳಿದುಬಂದಿದೆ, ಸಿಡಿಲು ಬಡಿದು ಜಾನುವಾರುಗಳು ಮರಣ ಹೊಂದಿರುವ ಘಟನೆಗಳು ನಡೆದಿವೆ, ಕೂಡಲೇ ಜಿಲ್ಲಾಡಳಿತ ಸಂಬಂಧಿಸಿದ ಅಧಿಕಾರಿಗಳಿಂದ ಮಾಹಿತಿ ತರಿಸಿಕೊಂಡು ವಿಪತ್ತು ನಿರ್ವಹಣಾ ನಿಧಿಯಡಿ ಪರಿಹಾರ ನೀಡಬೇಕು.

# 5ನೇ ಸುತ್ತಿನ ಕಾಲುಬಾಯಿ ಲಸಿಕಾ ಕಾರ್ಯಕ್ರಮಕ್ಕೆ ಚಾಲನೆ



**ವಿಜಯಪುರ :** ರಾಷ್ಟ್ರೀಯ ಜಾನುವಾರು ರೋಗ ನಿಯಂತ್ರಣ ಕಾರ್ಯಕ್ರಮದಡಿಯಲ್ಲಿ ಹಮ್ಮಿಕೊಂಡ 5ನೇ ಸುತ್ತಿನ ಕಾಲುಬಾಯಿ ಲಸಿಕಾ ಕಾರ್ಯಕ್ರಮಕ್ಕೆ ವಿಜಯಪುರ ಉಪ ವಿಭಾಗಾಧಿಕಾರಿ ಶ್ರೀಮತಿ ಶ್ವೇತಾ ಬೀಡಕರ ಚಾಲನೆ ನೀಡಿದರು.
ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ವತಿಯಿಂದ ಹಮ್ಮಿಕೊಂಡ ಲಸಿಕಾ ಕಾರ್ಯಕ್ರಮಕ್ಕೆ ಸೋಮವಾರ ಬುರಣಾಪುರದ ಸರ್ಕಾರಿ ಗೋಶಾಲೆಯಲ್ಲಿ ಗೋ ಪೂಜೆ ಮಾಡುವ ಮೂಲಕ ಚಾಲನೆ ನೀಡಿ ಮಾತನಾಡಿದ ಅವರು, ಏ.1 ರಿಂದ 30ರವರೆಗೆ ಲಸಿಕಾ ಕಾರ್ಯಕ್ರಮಕ್ಕೆ ಹಮ್ಮಿಕೊಂಡಿದ್ದು, ಲಸಿಕಾಕರಣ ಸಂದರ್ಭದಲ್ಲಿ ಲಸಿಕೆಯಿಂದ ಯಾವುದೇ ಜಾನುವಾರುಗಳು ವಂಚಿತವಾಗದಂತೆ ಎಲ್ಲ ಜಾನುವಾರುಗಳಿಗೆ ಲಸಿಕೆ ಹಾಕುವಂತೆ ತಿಳಿಸಿದ ಅವರು, ರೈತರು ಸಹ ಈ ಕಾರ್ಯಕ್ರಮದ ಸದುಪಯೋಗ ಪಡೆದುಕೊಂಡು ತಮ್ಮ ಜಾನುವಾರುಗಳಿಗೆ ಲಸಿಕೆ ಹಾಕಿಸಿಕೊಳ್ಳುವಂತೆ ಅವರು ಮನವಿ ಮಾಡಿಕೊಂಡರು.
ಈ ಸಂದರ್ಭದಲ್ಲಿ ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ಉಪನಿರ್ದೇಶಕ ಡಾ.ಅಶೋಕ ಗೊಣಸಗಿ, ಮುಖ್ಯ ಪಶು ವೈದ್ಯಾಧಿಕಾರಿ ಡಾ.ಬಿ.ಎಸ್. ಕನಮಡಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಎಲ್ಲ ಸಮಾಜದ ಜೊತೆಗೆ ಗೌರವ ಭಾವನೆ: ಸಂಸದ ಜಿಗಜಿಣಗಿ



**ವಿಜಯಪುರ :** ಸಮಾಜದ ಎಲ್ಲ ವರ್ಗದವರನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಬಡವರು,ದಲಿತರು ಮೇಲ್ವರ್ಗದವರು ಸೇರಿದಂತೆ ಎಲ್ಲರನ್ನೂ ಗೌರವ ಭಾವನೆ ಹೊಂದಿದರೆ ರಾಜಕಾರಣ ಮಾಡಲು ಸಾಧ್ಯ ಎಂಬದನ್ನು ಅರಿಯಬೇಕು ಎಂದು ಸಂಸದ ರಮೇಶ ಜಿಗಜಿಣಗಿ ಹೇಳಿದರು.

ನಗರದಲ್ಲಿ ಭಾನುವಾರ ಭಾರತೀಯ ಜನತಾ ಪಾರ್ಟಿ ಆಯೋಜಿಸಿದ್ದ ಶಕ್ತಿ ಕೇಂದ್ರಗಳ ಪ್ರಮುಖರ ಸಭೆಯನ್ನು ಉದ್ಘಾಟಿಸಿ ಮಾತನಾಡಿ, ರಾಜಕಾರಣ ಮಾಡಲು ಕಾರ್ಯಕರ್ತರು ಬೇಕು ಅವರು ಇಲ್ಲದಿದ್ದರೆ ನಾವು ಸೊನ್ನೆ ಇದ್ದಂತೆ ಅವರಿಂದ ಬಹಳಷ್ಟು ಕಲಿತಿದ್ದೇನೆ. ಬೂತ್‌ಗಳಲ್ಲಿನ ಶಕ್ತಿಯೂ ಎಲ್ಲಿಯೂ ಎಲ್ಲಿಯೂ ಇಲ್ಲ. ಎಲ್ಲಾ ಬೂತ್‌ಗಳಲ್ಲಿ ಕಾಯಕರ್ತರು ಸರಿಯಾಗಿ ಪ್ರಚಾರ ಮಾಡಿದರೆ ಎಂದಿಗೂ ಸೋಲಾಗುವದಿಲ್ಲ. ಬೂತಗಳಲ್ಲಿ ಹೆಚ್ಚಿನ ಜವಾಬ್ದಾರಿಂದ ಕಾರ್ಯನಿರ್ವಹಿಸುವಂತೆ ಕಾಯಕರ್ತರಿಗೆ ಕರೆ ನೀಡಿದರು.
ಕಳೆದ 15 ವರ್ಷಗಳಿಂದ ಜಿಲ್ಲೆಯ ಸಂಸದನಾಗಿ ಕೇಂದ್ರ ಸಚಿವನಾಗಿ ರೈಲ್ವೇ ಹಳಿಗಳ ವಿದ್ಯುತ್ತಿಕರಣ, ರಾಷ್ಟ್ರೀಯ ಹೆದ್ದಾರಿ, ಎನ್.ಟಿ.ಪಿಸಿ ಸೇರಿದಂತೆ ಕಳೆದ 10 ವರ್ಷಗಳಲ್ಲಿ 1 ಲಕ್ಷ ಕೋಟಿ ರೂ. ವೆಚ್ಚದ ಅಭಿವೃದ್ಧಿ ಕೆಲಸಗಳಾಗಿವೆ ಎಂದು ಸಮರ್ಥಿಸಿಕೊಂಡರು.
ಲಂಬಾಣಿ ಜನರ ಅತ್ಯಂತ ವಿಶ್ವಾಸ ಪ್ರೀತಿಯಿಂದ ಇದ್ದೇನೆ. ನನ್ನ ಮತ ಸಹ ತಾಂಡಾದಲ್ಲಿಯೇ ಇದೆ. ಲಂಬಾಣಿ ಜನರ ಬಗ್ಗೆ ನನ್ನ ಹೇಳಿಕೆ ತಿರುಚಲಾಗಿದೆ. ಅವರ ಬಗ್ಗೆ ನಾನು ಕೆಟ್ಟ ಪದ ಪ್ರಯೋಗಿಸಿಲ್ಲ ಎಂದರು.
ರಾಜ್ಯದ ಕಾಂಗ್ರೆಸ್ ಸರ್ಕಾರ ದಲಿತರ ಅಭಿವೃದ್ಧಿಗೆ ಇದ್ದ ಹಣವನ್ನು ದುರುಪಯೋಗಪಡಿಸಿಕೊಂಡಿದ್ದಾರೆ. ಅವರಿಗೆ ತಕ್ಕ ಪಾಠ ಕಲಿಸಬೇಕೆಂದರು.
ರಾಮಕೃಷ್ಣ ಹೆಗಡೆ,ಜೆ.ಎಚ್.ಪಟೇಲ ಅವರ ಮಾರ್ಗದಲ್ಲಿ ನಡೆಯುತ್ತಿದ್ದೇನೆ. ಅವರೇ ನನಗೆ ಕೊನೆಗೆ ಕ್ಷಣದಲ್ಲಿ ಬಿಜೆಪಿ ಮುದೊಂದು ದಿನ ಹಳ್ಳಿ ಹಳ್ಳಿಗಳಲ್ಲಿ ದೊಡ್ಡ ಪಕ್ಷವಾಗಿ ಹೊರಹೊಮ್ಮುತ್ತದೆ. ಆದರೆ ಅವರು ಇದೇ ಪಕ್ಷಕ್ಕೆ ಹೋಗು ಎಂದು ಎಲ್ಲಿಯೂ ಹೇಳಲಿಲ್ಲ. ಆದರೂ ಬಿಜೆಪಿ ಮೂಲಕ ಮತ್ತೆ ರಾಜಕೀಯ ಜೀವನ ಮುಂದುವರೆಸಿಕೊಂಡು ಬಂದೇ ಎಂದರು.
ಬಿಜೆಪಿ ಜಿಲ್ಲಾಧ್ಯಕ್ಷ ಆರ್.ಎಸ್.ಪಾಟೀಲ ಕೂಚಬಾಳ ಮಾತನಾಡಿ, ದೇಶದಲ್ಲಿ 10 ವರ್ಷದ ಪ್ರಧಾನಿ ನರೇಂದ್ರ ಮೋದಿ ಆಡಳಿತಕ್ಕೆ ಜಗತ್ತೆ ಮೆಚ್ಚಿದೆ. 3ನೇ ಬಾರಿ ಪ್ರದಾನಿಯಾಗಲು ದೇಶದ ಜನರೆ ತೀರ್ಮಾನಿಸಿದ್ದಾರೆ. 2014ಕ್ಕಿಂತ ಮೊದಲು ದೇಶದಲ್ಲಿ ಸುರಕ್ಷತೆ ಭಾವನೆ ಇರಲಿಲ್ಲ. ಕಳೆದ 10 ವರ್ಷಗಳಲ್ಲಿ ರಕ್ಷಣಾ ಕ್ಷೇತ್ರದಲ್ಲಿ ಪ್ರಧಾನಿ ಮೋದಿ ಅವರ ಆಡಳಿತವನ್ನು ಜನರು ಮೆಚ್ಚಿದ್ದಾರೆ ಎಂದರು.
ಪ್ರಧಾನಿ ಮೋದಿ, ಗೃಹ ಸಚಿವ ಅಮಿತಾ ಷಾ ಅವರ ವಿರುದ್ಧ ಮುಖ್ಯಮಂತ್ರಿಗಳ ಪುತ್ರನ ಪದ ಪ್ರಯೋಗ ಯಾರೂ ಕ್ಷಮಿಸಲ್ಲ ಇವರ ಕುತಂತ್ರ ನಡೆಯುವದಿಲ್ಲ ಎಂದು ಕಾಂಗ್ರೆಸ್ ವಿರುದ್ಧ ಹರಿಹಾಯ್ದರು.
ಚುನಾವಣೆ ಗೆಲ್ಲಲು ಪ್ರತಿ ಬೂತ್ ಗೆಲ್ಲುವದು ಅನಿವಾರ್ಯ ಕೇಂದ್ರ ಸರ್ಕಾರದ ಯೋಜನೆಗಳನ್ನುಲು ಮನೆ-ಮನೆಗಳಿಗೆ ಕಾರ್ಯಕರ್ತರು ತಲುಪಿಸಬೇಕು. ಅತೀ ಹೆಚ್ಚು ಮತಗಳಿಂದ ರಾಜ್ಯದ ಎಲ್ಲ ಬಿಜೆಪಿ ಅಭ್ಯರ್ಥಿಗಳು ಗೆಲುವಿಗೆ ಶ್ರಮಿಸಬೇಕೆಂದು ಕರೆ ನೀಡಿದರು.
ವೇದಿಕೆಯ ಮೇಲೆ ಮಾಜಿ ಸಚಿವ ಎಸ್.ಕೆ.ಬೆಳ್ಳುಬ್ಬಿ, ಮಾಜಿ ಶಾಸಕ ಜಿಲ್ಲಾ ಚುನಾವಣಾ ಪ್ರಭಾರಿ, ರಾಜಶೇಖರ ಶೀಲವಂತ, ಮಾಜಿ ಶಾಸಕ ಸೋಮನಗೌಡ ಪಾಟೀಲ, ಮುಖಂಡ ವಿಜುಗೌಡ ಪಾಟೀಲ, ಮಾಜಿ ವಿ.ಪ.ಸದಸ್ಯ ಅರುಣ ಶಹಾಪೂರ, ಸಂಘಟನಾ ಮಹಾಮಂತ್ರಿ ಪ್ರಕಾಶ ಅಕ್ಕಲಕೋಟ, ಬೆಳಗಾವಿ ಪ್ರಭಾರಿ, ಚಂದ್ರಶೇಖರ ಕವಟಗಿ, ಸಂಜೀವ ಐಹೊಳೆ,ಮಹಿಳಾ ಘಟಕ ಅಧ್ಯಕ್ಷೆ ಸ್ವಪ್ನಾ ಕಣಮುಚನಾಳ, ಸೇರಿದಂತೆ ಹಲವರು ಇದ್ದರು.
ಪ್ರಧಾನ ಕಾರ್ಯದರ್ಶಿ ಈರಣ್ಣಾ ರಾವೂರ ಸ್ವಾಗತಿಸಿದರು. ಮುಳುಗೌಡ ಪಾಟೀಲ ನಿರೂಪಿಸಿದರು. ಈ ಸಂದರ್ಭದಲ್ಲಿ ವಿವಿಧ ತಾಲೂಕುಗಳ ಮಹಾಶಕ್ತಿ ಕೇಂದ್ರಗಳ ಪ್ರಮುಖರು ಇದ್ದರು.

# ಇಂಡಿ ತಾಪಂ ಕಚೇರಿಯಲ್ಲಿ ಸ್ವೀಪ್ ಸಮಿತಿ ನೋಡಲ್ ಅಧಿಕಾರಿಗಳ ಸಭೆ



**ವಿಜಯಪುರ :** ಇಂಡಿ ತಾಲೂಕು ಪಂಚಾಯತ್ ಕಾರ್ಯಾಲಯದಲ್ಲಿ ತಾಲುಕು ಕಾರ್ಯನಿರ್ವಾಹಕ ಅಧಿಕಾರಿ ಅವರ ಅಧ್ಯಕ್ಷತೆಯಲ್ಲಿ ತಾಲೂಕು ಮಟ್ಟದ ಸ್ವಿಪ್ ಸಮಿತಿ ನೋಡಲ್ ಅಧಿಕಾರಿಗಳ ಸಭೆ ನಡೆಯಿತು. ಇದೇ ಸಂದರ್ಭದಲ್ಲಿ ಮತದಾರ ಪ್ರತಿಜ್ಞಾ ವಿಧಿಯನ್ನು ಬೋಧಿಸಲಾಯಿತು.

# ಕಡ್ಡಾಯವಾಗಿ ಮತದಾನ ಮಾಡಿ ಸುಭದ್ರ ರಾಷ್ಟ್ರ ನಿರ್ಮಾಣಕ್ಕೆ ಕೈ ಜೋಡಿಸಿ



**ವಿಜಯಪುರ :** ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಪ್ರತಿಯೊಬ್ಬ ಅರ್ಹ ಮತದಾರರು ಕಡ್ಡಾಯವಾಗಿ ಮತ ಚಲಾಯಿಸುವ ಮೂಲಕ ಸುಭದ್ರ ರಾಷ್ಟ್ರ ನಿರ್ಮಾಣದಲ್ಲಿ ಕೈ ಜೋಡಿಸಬೇಕು ಎಂದು ಜಿಲ್ಲಾ ಶಸ್ತ್ರ ಚಿಕಿತ್ಸಕರಾದ ಡಾ.ಶಿವಾನಂದ ಮಾಸ್ತಿಹೊಳಿ ಕರೆ ನೀಡಿದರು.
ನಗರದ ಜಿಲ್ಲಾ ಆಸ್ಪತ್ರೆಯಲ್ಲಿ ರೋಟರಿ ಕ್ಲಬ್ ವಿಜಯಪುರ ಇವರ ಸಹಯೋಗದಲ್ಲಿ ಹಮ್ಮಿಕೊಂಡ ಸ್ವಚ್ಛ ಭಾರತ, ಮಿತ ನೀರು ಬಳಕೆ ಹಾಗೂ ಮತದಾರ ಪ್ರತಿಜ್ಞಾವಿಧಿ ಸ್ವೀಕಾರ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿ, ಮನುಷ್ಯನ ಉತ್ತಮ ಆರೋಗ್ಯ ಕಾಪಾಡುವಲ್ಲಿ ಸ್ವಚ್ಛತ್ರೆ ಅತಿ ಮುಖ್ಯವಾಗಿರುತ್ತದೆ. ಈ ನಿಟ್ಟಿನಲ್ಲಿ ಪ್ರತಿಯೊಬ್ಬರು ಸ್ವಚ್ಛತೆಗೆ ಆದ್ಯತೆ ನೀಡಬೇಕು. ಅದರಂತೆ ಜಗತ್ತಿನ ಅತ್ಯಅಮೂಲ್ಯವಾದ ವಸ್ತು ನೀರು. ಇದರ ಸದುಪಯೋಗವಾಗಬೇಕು. ನೀರು ಎಲ್ಲೆಂದರಲ್ಲಿ ಚೆಲ್ಲದೇ ಅವಶ್ಯಕತೆಯನುಸಾರವಾಗಿ ಮಿತವಾಗಿ ನೀರನ್ನು ಬಳಸುವಂತೆ ಕರೆ ನೀಡಿದ ಅವರು, ಅತಿಯಾದ ಬಳಕೆಯಿಂದ ಮುಂದಿನ ಪೀಳಿಗೆ ಮೇಲೆ ಬೀರುವ ಪರಿಣಾಮ ಕುರಿತು ವಿವರವಾಗಿ ಮಾತನಾಡಿದರು.
ಇದೇ ಸಂದರ್ಭದಲ್ಲಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಎಲ್ಲರಿಗೆ ಮತದಾನ ಪ್ರತಿಜ್ಞಾ ವಿಧಿ ಬೋಧಿಸಲಾಯಿತು.
ಅಧ್ಯಕ್ಷರು ರೋಟರಿ ಕ್ಲಬ್ ಅಧ್ಯಕ್ಷರಾದ ಮಲ್ಲಿಕಾರ್ಜುನ ಕಲಾದಗಿ ಅವರು ಮಾತನಾಡಿ, ರೋಟರಿ ಕ್ಲಬ್ ಸಾಮಾಜಿಕ ಕ್ಷೇತ್ರಗಳಲ್ಲಿ ನೀಡುತ್ತಿರುವ ಸೇವೆಗಳ ಕುರಿತು ವಿವರಿಸಿ, ಇನ್ನು ಮುಂದೆ ಪ್ರತಿ ತಿಂಗಳು ಜಿಲ್ಲಾ ಆಸ್ಪತ್ರೆಯ ಸಹಯೋಗದಲ್ಲಿ ಆವರಣ ಸ್ವಚ್ಛಗೊಳಿಸುವುದು ಸೇರಿದಂತೆ ವಿವಿಧ ಸಾಮಾಜಿಕ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುವುದುಎಂದುತಿಳಿಸಿದರು.
ಕ್ಲಬಿನ ಚಾರ್ಡರ್ ಅಧ್ಯಕ್ಷರಾದ ಡಿ.ಎಸ್. ಪಾಟೀಲ ಇವರು ಮಾತನಾಡಿದರು.
ಕಾರ್ಯಕ್ರಮದಲ್ಲಿ ಡಾ. ಚಂದು ರಾಠೋಡ ನಿವಾಸಿ ವೈದರು, ಆಸ್ಪತ್ರೆ ಎಲ್ಲ ವೈದರು, ಶುಶ್ರೂಷಕ ಅಧಿಕಾರಿಗಳು, ಎಲ್ಲ ಸಿಬ್ಬಂಧಿಗಳು ಮತ್ತು ನರ್ಸಿಂಗ ' ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರು. ರೋಟರಿ ಕ್ಲಬ್ ಸದಸ್ಯರಾದ ಡಾ. ಅಶೋಕ ವಾಲಿ. ಗುರುಶಾಂತ ನಿಡೋಣಿ. ದಿಲೀಪ ಪೋಜಾರಿ,ಶ್ರೀಕಾಂತ ಶಿರಡೋಣ,ದಿಲೀಪ ತಾಳಿಕೋಟಿ,
ವಿಠ್ಠಲ ತೇಲಿ, ಉದಯ ಯಾಳವಾರ, ಪ್ರಸಾದ ನಾಯ್ಡು, ಶೈಲೇಶ ಸಾವಳಾ, ಬಸವರಾಜ ಸೊನ್ನದ, ರವಿ ಅಂಗಡಿ, ರಾಜು ಬಿಜ್ಜರಗಿ, ರಾಜ ಶಾಹಾ, ಡಾ. ಹಂಪ್ಪನಗೌಡ ಭಾಗವಹಿಸಿ ಸ್ವಚ್ಛತಯ ಅಭಿಯಾನದಲ್ಲಿ ತೊಡಗಿಸಿಕೊಂಡರು.

# ಕಾಂಗ್ರೆಸ್ ನವರು ತಮ್ಮ ಆಡಳಿತ ಆತ್ಮಾವಲೋಕನ ಮಾಡಿಕೊಳ್ಳಲಿ: ಸಂಸದ ರಮೇಶ ಜಿಗಜಿಣಗಿ



**ವಿಜಯಪುರ :** 70 ವರ್ಷಗಳ ಕಾಲ ದೇಶವನ್ನಾಳಿದ ಕಾಂಗ್ರೆಸ್ ನವರು ತಾವು ಎಷ್ಟು ಸ್ವಚ್ಛವಾಗಿದ್ದೀರಿ ಎಂದು ಆತ್ಮಾವಲೋಕನ ಮಾಡಿಕೊಳ್ಳಲಿ ಎಂದು ಸಂಸದ ರಮೇಶ ಜಿಗಣಗಿ ಖಾರವಾಗಿ ಪ್ರಶ್ನಿಸಿದರು.
ಸೋಮವಾರ ನಗರದ ಬಿಜೆಪಿ ಕಚೇರಿಯಲ್ಲಿ ಆಯೋಜಿಸಲಾಗಿದ್ದ ವಿವಿಧ ಮೋರ್ಚಾಗಳ ಸಭೆಯನ್ನುದ್ದೇಶಿ ಮಾತನಾಡಿ, ಮುಸ್ಲಿಂ, ದಲಿತ,ಹಿಂದುಳಿದವರ ಮತ ಪಡೆದು ಅವರಿಗೆ ಏನು ಮಾಡಿದರು. ಅವರಿಗೆ ಒಂದು ಮನೆಯನ್ನಾದರೂ ಕಟ್ಟಿಸಿಕೊಟ್ಟಿದ್ದೀರಾ ಎಂದು ಪ್ರಶ್ನಿಸಿದರು. ಕೇಲವ ಅವರ ಮತ ಪಡೆದು ತಮ್ಮ ಮನೆ ತುಂಬಿಸಿಕೊಟ್ಟಿದ್ದಾರೆಂದು ಆರೋಪಿಸಿದರು.
ಕಾಂಗ್ರೆಸ್ ನವರು ಎಷ್ಟೇ ಪ್ರಯತ್ನಿಸಿದರೂ 2 ರಿಂ3 ಸ್ಥಾನ ಗಳಿಸಲು ಸಾಧ್ಯವಿಲ್ಲ. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಇದ್ದರೂ, ಜನತೆ ನಮ್ಮ ಪರ ಇದ್ದಾರೆ. ದೇಶದ ರಕ್ಷಣೆ ಪ್ರದಾನಿ ನರೇಂದ್ರ ಮೋದಿ ಅವರಿಂದ ಮಾತ್ರ ಸಾಧ್ಯ ಎಂದು ದೇಶದ ಜನತೆಗೆ ಮನವರಿಕೆ ಆಗಿದೆ ಎಂದು ಹೇಳಿದರು.
ಬಿಜೆಪಿ ಜಿಲ್ಲಾಧ್ಯಕ್ಷ ಆರ್.ಎಸ್.ಪಾಟೀಲ್ ಕೂಚಬಾಳ ಮಾತನಾಡಿ, ಹಿಂದಿನ ಎಲ್ಲಾ ಸರ್ಕಾರಗಳು ಕೇವಲ ಭ್ರಷ್ಟಚಾರದಲ್ಲಿ ಮುಳುಗಿದ್ದವು. ರಾಜ್ಯದ ಕಾಂಗ್ರೆಸ್ ಸರ್ಕಾರ ಸಿಎಂ, ಡಿಸಿಎಂ ಅವರು ಆಡಳಿತಕ್ಕೆ ಬರುವಾಗ ಬಳೀ ಸುಳ್ಳು ಭರವಸೆಗಳನ್ನು ನೀಡಿ ಅಧಿಕಾರಕ್ಕೆ ಬಂದರು. ಬರಗಾಲದಂತ ಈ ಸಂದರ್ಭದಲ್ಲಿ ರಾಜ್ಯದ ಜನರು ಜಾನುವಾರುಗಳಿಗೆ ಕುಡಿಯುವ ನೀರು ಸೇರಿದಂತೆ ಅನೇಕ ಸಮಸ್ಯೆಗಳಿಗೆ ನೆರವಿಗೆ ಬರುತ್ತಿಲ್ಲ ಎಂದು ದೂರಿದರು.
ಕಾಂಗ್ರೆಸ್ ನವತಿಗೆ ಕೇವಲ ಒಂದು ಕೋಮು ಓಲೈಕೆ ಮಾಡಿ ಅಧಿಕಾರಕ್ಕೆ ಬರುವದೇ ಅವರ ಗುರಿ. ರಾಷ್ಟ್ರದ ಆರ್ಥಿಕ ರಕ್ಷಣೆ ಅವರಿಗೆ ಬೇಕಿಲ್ಲ. ಕಳೆದ 65 ವರ್ಷಗಳಲ್ಲಿ ದೇಶದಲ್ಲಿ ಅರಾಜಕತೆ ಸೃಷ್ಟಿಸಿದರು. ಆದರೆ ಈಗ ಪ್ರಧಾನಿ ಮೋದಿ ಅವರ 10 ವರ್ಷಗಳ ಆಡಳಿತದಲ್ಲಿ ಯಾವದೇ ದೇಶದವರು ನಮ್ಮ ತಂಟೆಗೆ ಬಂದರೆ ಪರಿಣಾಮ ಏನಾಗುತ್ತದೆ ಎಂಬುದಕ್ಕೆ ಕಾಲು ಕೆದರಿ ಜಗಳಕ್ಕೆ ಬಂದ ದೇಶಗಳು ದಿವಾಳಿಯಾಗಿವೆ ಎಂದು ಹೇಳಿದರು.
ವಿಧಾನ ಪರಿಷತ್ ಮಾಜಿ ಸದಸ್ಯ ಅರುಣ ಶಹಾಪೂರ ಮಾತನಾಡಿದರು.
ಪ್ರಭಾರಿ ರಾಜೇಖರ ಶೀಲವಂತ, ವಿಭಾಗ ಪ್ರಭಾರಿ ಚಂದ್ರಶೇಖರ ಕವಟಗಿ, ವಿಭಾಗ ಸಂಘಟನಾ ಪ್ರದಾನ ಕಾರ್ಯದರ್ಶಿ ಪ್ರಕಾಶ ಅಕ್ಕಲಕೋಟ, ಮಹಿಳಾ ಮೋರ್ಚಾ ಅಧ್ಯಕ್ಷೆ ಸ್ವಪ್ನಾ ಕಣಮುಚನಾಳ,ಓಬಿಸಿ ಮೋರ್ಚಾ ಅಧ್ಯಕ್ಷೆ ವಿವೇಕಾನಂದ ಡಬ್ಬಿ, ಪ್ರಧಾನ ಕಾರ್ಯದರ್ಶಿ ಮುಳುಗೌಡ ಪಾಟೀಲ, ಸಾಬು ಮಾಶ್ಯಾಳ, ನಗರ ಮಂಡಲ ಅಧ್ಯಕ್ಷ ಶಂಕರ ಹೂಗಾರ , ಯುವಮೋರ್ಚಾ ಅಧ್ಯಕ್ಷೆ ಬಸವರಾಜ ಹೂಗಾರ, ಹಿಂದುಳಿ ವರ್ಗ ಅಧ್ಯಕ್ಷ ಸಿದ್ದು ಬುಳ್ಳಾ, ರೈತ ಮೋರ್ಚಾ ಅಧ್ಯಕ್ಷ ಗುರುಲಿಂಗಪ್ಪ ಅಂಗಡಿ, ಎಸ್.ಸಿ.ಮೋರ್ಚಾ ಅಧ್ಯಕ್ಷ ರವಿಕಾಂತ ವಗ್ಗೆ, ಅಲ್ಪಸಂಖ್ಯಾತ ಮೋರ್ಚಾ ಅಧ್ಯಕ್ಷ ಶೀತಲಕುಮಾರ ಓಗೆ ಸೇರಿದಂತೆ ಹಲವರು ಇದ್ದರು.

# ಅನುಭವ ಮಂಟಪ ನಿಜವಾದ ಸಂಸತ್ತು: ಡಾ. ಆಯ್. ಜಿ. ಮ್ಯಾಗೇರಿ




**ವಿಜಯಪುರ :** ಗುರು ಲಿಂಗ ಜಂಗಮ ಸೇವೆಗಳ ಮೂಲಕ ಕಾಯಕದ ಮಹತ್ವವನ್ನು ಸಾರಿದ ಕೀರ್ತಿ ಹನ್ನೆರಡನೇ ಶತಮಾನದ ಶರಣರಿಗೆ ಸಲ್ಲುತ್ತದೆ. ಅನುಭವ ಮಂಟಪ ಹನ್ನೆರಡನೆಯ ಶತಮಾನದ ನಿಜವಾದ ಸಂಸತ್ತು ಎಂದು ಜಿಲ್ಲಾ ಕೇಂದ್ರ ಕಾರಾಗೃಹದ ಅಧೀಕ್ಷಕ ಡಾ. ಆಯ್. ಜಿ. ಮ್ಯಾಗೇರಿ ಅಭಿಪ್ರಾಯಪಟ್ಟರು.
ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು , ತಾಲೂಕು ಹಾಗೂ ನಗರ ಘಟಕ ಸಾಹಿತ್ಯ ಪರಿಷತ್ತಿನ ಸಹಯೋಗದಲ್ಲಿ ನಡೆದ ದತ್ತಿನಿಧಿ ಕಾರ್ಯಕ್ರಮದಲ್ಲಿ ಸಸಿಗೆ ನೀರುಣಿಸುವ ಮೂಲಕ ಉದ್ಘಾಟಿಸಿಮಾತನಾಡಿದಅವರು,ಸತ್ಯ,ಶುದ್ಧ ಕಾಯಕದಿಂದ ಮಾಡಿದ ನಿಜವಾದ ಭಕ್ತಿ ಮಾತ್ರ ಶಿವಲಿಂಗಕ್ಕೆ ಸಲ್ಲುತ್ತದೆ ಎಂದರು.
ದತ್ತಿನಿಧಿ ಕಾರ್ಯಕ್ರಮದ ನಿಮಿತ್ಯ ಈರವ್ವ ಮಲ್ಲಪ್ಪ ಹಣಮಶೆಟ್ಟಿ, ದತ್ತಿ ದಾನಿಗಳು, ಎಸ್.ಎಮ್. ಹಣಮಶೆಟ್ಟಿ. "ಕಾಯಕಯೋಗಿ ನೂಲಿಯ ಚಂದಯ್ಯ"ನವರ ವಿಷಯದ ಕುರಿತು ಜಯಶ್ರೀ ಹಿರೇಮಠ ಅವರು ಉಪನ್ಯಾಸ ನೀಡಿ, ವಿಜಯಪುರ ಜಿಲ್ಲೆಯ ಶಿವಣಗಿಯ ಶ್ರೇಷ್ಠ ಕಾಯಕ ಶರಣ-ರಾದ ನೂಲಿಯ ಚಂದಯ್ಯನವರ ಕಾಯಕದ ಮಹತ್ವವನ್ನು ಎಲ್ಲರೂ ಅರಿಯಬೇಕು. ಯಾವುದೇ ಕಾಯಕವನ್ನು ಭಾವ ಶುದ್ಧಿಯಿಂದ,ಅಂತಃಕರಣೆಯಮೂಲಕಮಾಡಿದಾಗಮಾತ್ರ ನಿಜವಾದ ಆತ್ಮದ ಉನ್ನತಿ ಸಾಧ್ಯವಾಗುತ್ತದೆ. ನಾವು ಮಾಡಿದ ಕಾಯಕಕ್ಕೆ ಪ್ರತಿಯಾಗಿ ಹೆಚ್ಚಿನದನ್ನು ಅಪೇಕ್ಷಿಸಬಾರದು ಎಂಬುದನ್ನು ಅನೇಕ ನಿದರ್ಶನಗಳ ಮೂಲಕ ಅವರು ವಿವರಿಸಿದರು.
ಉಪನ್ಯಾಸ ಎರಡರ ದತ್ತಿ ದಿ. ಕಾಶೀನಾಥ ಸಿದ್ಧಮಲ್ಲಪ್ಪ ಇಂಗಳೇಶ್ವರ ದತ್ತಿ ದಾನಿಗಳು ಎಸ್. ಕೆ. ಇಂಗಳೇಶ್ವರ. ಯಡೆಯೂರು ಸಿದ್ಧಲಿಂಗೇಶ್ವರರ ವಿಷಯದ ಕುರಿತು ಉಪನ್ಯಾಸ ನೀಡಿದ, ಕವಿಯಿತ್ರಿ ಸುಜಾತಾ ಹ್ಯಾಳದ ಅವರು ಹದಿನಾರನೇ ಶತಮಾನದಲ್ಲಿ ಆಗಿ ಹೋದ ಕನ್ನಡ ನಾಡು ಕಂಡ ಅನುಭಾವಿ ಸಂತ ಶರಣರಲ್ಲಿ ಎಡೆಯೂರಿನ ಶ್ರೀ ಸಿದ್ಧಲಿಂಗೇಶ್ವರರು ಒಬ್ಬ ಶ್ರೇಷ್ಠ ಪವಾಡ ಪುರುಷರಾಗಿದ್ದರು. ಸಿದ್ಧಲಿಂಗೇಶ್ವರರು ಚೆನ್ನಬಸವೇಶ್ವರರ ಮಾರ್ಗದರ್ಶನದಲ್ಲಿ ವಿದ್ಯಾಭ್ಯಾಸ ಮುಗಿಸಿದ ನಂತರ ಲೋಕ ಸಂಚಾರ ಮಾಡುತ್ತಾ , ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ, ಪಶ್ಚಿಮ ಘಟ್ಟಗಳಿಂದ ಅರುಣಾಚಲ ಪ್ರದೇಶದವರೆಗೆ ಇಡೀ ಭಾರತವನ್ನು ಸಂಚರಿಸಿ ಶಿವಯೋಗ, ಶಿವಭಕ್ತಿಯನ್ನು ಪ್ರಸಾರ ಮಾಡುವ ಮೂಲಕ ಸಿದ್ಧಲಿಂಗೇಶ್ವರರ ಅನೇಕ ಸಂದೇಶಗಳನ್ನು ಉಪನ್ಯಾಸದಲ್ಲಿ ತಿಳಿಸಿಕೊಟ್ಟರು.
ಅಧ್ಯಕ್ಷತೆ ವಹಿಸಿ ಮಾತನಾಡಿದ ನಿವೃತ್ತ ಮುಖ್ಯಾಧ್ಯಾಪಕಿ ಶಾರದಾ ಐಹೊಳ್ಳಿ ಅವರು, ಕಾಯಕಯೋಗಿ ನೂಲಿಯ ಚಂದಯ್ಯನವರ ಹಾಗೂ ಯಡಿಯೂರು ಶ್ರೀ ಸಿದ್ಧಲಿಂಗೇಶ್ವರರ ಜೀವನದ ಸಂದೇಶಗಳನ್ನು ನಾವೆಲ್ಲರೂ ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವ ಮೂಲಕ, ಸ್ವತಃಹ ಗಳಿಸಿದ ಹಣದಿಂದ ಮಾತ್ರ ದಾಸೋಹ ಮಾಡಿದಾಗ ಅದು ಭಗವಂತನ ಪಾದಕ್ಕೆ ಸಮರ್ಪಿತವಾಗಲು ಸಾಧ್ಯವೆಂದರು.
ಕಾರ್ಯಕ್ರಮದಲ್ಲಿ ಕುಮಾರಿ ಅನುಶ್ರೀ ಹಾಗೂ ಶ್ರೀನಿಧಿ ಬಂಡೆಯವರು ಸುಶ್ರಾವ್ಯವಾಗಿ ವಚನ ಗಾಯನ ಮಾಡುವ ಮೂಲಕ ಗಮನ ಸೆಳೆದರು.
ಪೂಜ್ಯ ಶ್ರೀ. ವಿರತೀಶಾನಂದ ಸ್ವಾಮೀಜಿಯವರು ಸಾನಿಧ್ಯ ವಹಿಸಿ ಮಾತನಾಡಿ, "ಲಿಂಗದ ಬಾಯಿ ಜಂಗಮವೆಂದು, ಹಿರಿದಾದ ಒಂದು ಮರಕ್ಕೆ ಮೂಲ ಆ ಮರದ ಬೇರು ಎನ್ನುತ್ತಾ , ವಚನ ಸಾಹಿತ್ಯ ಇಡೀ ವಿಶ್ವಕ್ಕೆ ಮಾದರಿಯಾದ ಸಾಹಿತ್ಯವಾಗಿದೆ ಎಂದರು.
ಡಾ. ವ್ಹಿ. ಡಿ. ಐಹೊಳ್ಳಿ, ಶಶಿಕಲಾ ನಾಯ್ಕೋಡಿ, ಪ್ರಭು ಅಳ್ಳಗಿ, ಜಿಲ್ಲಾ ದತ್ತಿ ಸಂಚಾಲಕ ರಾಜೇಸಾಬ ಶಿವನಗುತ್ತಿ ಮುಖ್ಯ ಅತಿಥಿಗಳಾಗಿ ವೇದಿಕೆಯ ಮೇಲೆ ಇದ್ದರು.
ಕಾರ್ಯಕ್ರಮದಲ್ಲಿ ಜಿಲ್ಲಾ ಕ.ಸಾ.ಪ ಅಧ್ಯಕ್ಷ ಹಾಸಿಂಪೀರ ವಾಲೀಕಾರ,ಸಾಹಿತಿಗಳಾದ ಶಂಕರ ಬೈಚಬಾಳ,ಸಿದ್ದಾರಾಮ ಬಿರಾದಾರ,ವಿದ್ಯಾವತಿ ಅಂಕಲಗಿ,ಅನ್ನಪೂರ್ಣ ಬೆಳ್ಳೆಣ್ಣವರ, ವಿಜಯಲಕ್ಷ್ಮಿ ಹಳಕಟ್ಟಿ, ಕಮಲಾ ಮುರಾಳ, ಜಿ. ಎಸ್. ಬಳ್ಳೂರ, ಶ್ರೀಶೈಲ ಬಿರಾದಾರ, ಸಂತೋಷಕುಮಾರ ಬಂಡೆ, ಅಹ್ಮದ್ ವಾಲೀಕಾರ, ಅನಸೂಯಾ ಮಜಗಿ, ಗಂಗಮ್ಮ ರಡ್ಡಿ , ಬಿ. ವಿ. ಪಟ್ಟಣಶೆಟ್ಟಿ, ಯುವರಾಜ್ ಚೋಳಕೆ, ಎ. ಎಚ್. ಕಜರಗಿ, ಅಲ್ತಾಫ್ ಮದಭಾವಿ ಹಾಜರಿದ್ದರು.
ಕಸಾಪ ಗೌರವ ಕಾರ್ಯದರ್ಶಿ ಸುಭಾಸ ಕನ್ನೂರ ಸ್ವಾಗತಿಸಿದರು.

# ಲೋಕಸಭಾ ಚುನಾವಣೆ: ಜಪ್ತಿಯಾದ ನಗದು ಬಿಡುಗಡೆಗೆ ಸಮಿತಿ ರಚನೆ

**ಬೆಳಗಾವಿ :** ಸಾರ್ವತ್ರಿಕ ಲೋಕಸಭಾ ಚುನಾವಣಾ 2024ರ ಪ್ರಯುಕ್ತ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿದ್ದು, ಯಾವುದೇ ವ್ಯಕ್ತಿಯು ರೂ.50,000 ಮೇಲ್ಪಟ್ಟು ನಗದು ಮೊತ್ತವನ್ನು ಯಾವುದೇ ದಾಖಲೆಗಳಿಲ್ಲದೇ ತೆಗೆದುಕೊಂಡು ಹೋಗುತ್ತಿದ್ದಲ್ಲಿ, ಸದರಿ ಮೊತ್ತವು ಚುನಾವಣಾ FST/ SST ಯವರಿಂದ ಜಪ್ತಿಯಾದ ಸಂದರ್ಭದಲ್ಲಿ ಅಂತಹ ಮೊತ್ತವನ್ನು ಕೂಡಲೇ ಬಿಡುಗಡೆಗೊಳಿಸಲು ಕ್ಯಾಶ್ ರಿಲೀಸ್ ಕಮಿಟಿ ರಚಿಸಲಾಗಿರುತ್ತದೆ.
ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಕ್ಯಾಶ್ ರಿಲೀಸ್ ಕಮೀಟಿ ಅಧ್ಯಕ್ಷರಾಗಿರುತ್ತಾರೆ. ಗೌರಿಶಂಕರ ಕಡೇಚೂರ (ಮೊಬೈಲ್-9560273950) ಅವರು ಸಮಿತಿಯ ಸದಸ್ಯ ಕಾರ್ಯದರ್ಶಿ ಗಳಾಗಿದ್ದು, ದಾಖಲೆ ಹಾಜರುಪಡಿಸಿ ನಗದು ಮೊತ್ತದ ಬಿಡುಗ-'ಡೆಗಾಗಿ ಇವರ ಮೊಬೈಲ್ ಸಂಖ್ಯೆಗೆ ಕರೆ ಮಾಡಬಹುದಾಗಿದೆ.
FST/ SST ತಂಡದವರು ನಗದು ಮೊತ್ತ ಜಪ್ತಿ ಮಾಡಿದ ಬಳಿಕ ಸಾರ್ವಜನಿಕರು ಸೂಕ್ತ ದಾಖಲೆ ಸಲ್ಲಿಸಿ ನಗದು ಮೊತ್ತವನ್ನು ಹಿಂಪಡೆದುಕೊಳ್ಳಬಹುದು ಎಂದು ಜಿಲ್ಲಾ ನೋಡಲ್ ಅಧಿಕಾರಿಗಳು, ಚುನಾವಣಾ ವೆಚ್ಚ ಮೇಲ್ವಿಚಾರಣೆ ಮತ್ತು ಸದಸ್ಯ ಕಾರ್ಯದರ್ಶಿಗಳು, ಜಿಲ್ಲಾ ಕ್ಯಾಶ್ ರಿಲೀಸ್ ಕಮಿಟಿ ಹಾಗೂ ಕಾಡಾ ಮುಖ್ಯ ಲೆಕ್ಕಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ಪೊಲೀಸರ ಪಾತ್ರ ಪ್ರಮುಖ

**ಹುಬ್ಬಳ್ಳಿ :** ವೀರ, ಧೀರ, ನಿಸ್ವಾರ್ಥ ಸೇವೆ ಹಾಗೂ ಕರ್ತವ್ಯ ನಿಷ್ಠೆ ತೋರಿದ ಪೊಲೀಸ್‌ರನ್ನು ನೆನೆಯುವ ನಿಟ್ಟಿನಲ್ಲಿ ಪ್ರತಿ ವರ್ಷ ಏಪ್ರೀಲ್ 2 ರಂದು ಪೊಲೀಸ್ ಧ್ವಜ ದಿನಾಚರಣೆಯನ್ನು ಆಚರಿಸಲಾಗುತ್ತದೆ. ನಿವೃತ್ತ ಪೊಲೀಸ್ ಅಧಿಕಾರಿಗಳನ್ನು ಸನ್ಮಾನಿಸಿ ಗೌರವಿಸುವ ಉದ್ದೇಶದಿಂದ ಈ ದಿನವನ್ನು ಆಚರಣೆ ಮಾಡಲಾಗುವುದು. ಬೇರೆ ಬೇರೆ ಇಲಾಖೆಗಳಿಗೆ ಹೋಲಿಸಿದರೆ ಪೊಲೀಸ್ ಇಲಾಖೆ ಅತ್ಯಂತ ಶಿಸ್ತಿನ ಇಲಾಖೆಯಾಗಿದೆ. ಸಮಾಜದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವುದರಲ್ಲಿ ಪೊಲೀಸರು ಬಹಳ ಪ್ರಮುಖ ಪಾತ್ರ ವಹಿಸಿರುತ್ತಾರೆ ಎಂದು ನಿವೃತ್ತ ಪೊಲೀಸ್ ಸಬ್ ಇನ್ಸಪೆಕ್ಟರ್ ಎಸ್. ಎಲ್. ಕಸ್ತೂರಿ ಹೇಳಿದರು.

ಇಂದು ಗೋಕುಲ ರಸ್ತೆಯ ಹೊಸ ಸಶಸ್ತ್ರ ಮೀಸಲು ಪಡೆಯ ಕವಾಯತು ಮೈದಾನದಲ್ಲಿ ಹುಬ್ಬಳ್ಳಿ ಧಾರವಾಡ ಪೊಲೀಸ್ ಆಯುಕ್ತಾಲಯದಿಂದ ಹಮ್ಮಿಕೊಳ್ಳಲಾಗಿದ್ದ ಪೊಲೀಸ್ ಧ್ವಜ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಪೊಲೀಸ್ ಇಲಾಖೆಯ ಉನ್ನತ ಅಧಿಕಾರಿಗಳ ಸಹಕಾರ ಹಾಗೂ ಮಾರ್ಗದರ್ಶನದಿಂದ ಉತ್ತಮ ಸೇವೆ ಸಲ್ಲಿಸಬಹುದಾಗಿದೆ. ನಾವು ನಮ್ಮ ಕರ್ತವ್ಯದ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಬೇಕು. ಸಾರ್ವಜನಿಕರೊಂದಿಗೆ ಜನಸ್ನೇಹಿ ಪೊಲೀಸರಾಗಿ ಕರ್ತವ್ಯ ನಿರ್ವಹಿಸುವುದು ಹೆಮ್ಮೆಯ ವಿಷಯವಾಗಿದೆ. ಇಂತಹ ಇಲಾಖೆಯಲ್ಲಿ ದಿನದ 24 ಗಂಟೆ ಕಾಲ ಒತ್ತಡದಲ್ಲಿ ಸೇವೆ ಸಲ್ಲಿಸುತ್ತಿರುತ್ತೇವೆ. ಹೀಗಾಗಿ ನಮ್ಮ ಆರೋಗ್ಯದ ಕಡೆಗೆ ಹೆಚ್ಚಿನ ಗಮನ ಹರಿಸುವುದು ಸೂಕ್ತ. ಅಲ್ಲದೇ ಕುಟುಂಬ ವರ್ಗದವರಿಗೆ ಸಮಯವನ್ನು ಮೀಸಲಿಡಬೇಕಾಗಿರುವುದು ಬಹಳ ಅವಶ್ಯವಾಗಿದೆ. ಕೆಲವು ಸಂದರ್ಭಗಳಲ್ಲಿ ಜೀವದ ಹಂಗು ತೊರೆದು ಕರ್ತವ್ಯ ನಿರ್ವಹಣೆ ಮಾಡಬೇಕಾಗಿರುತ್ತದೆ. ಅಧಿಕಾರಿಗಳು ಹಾಗೂ ನಿವೃತ್ತ ಸಿಬ್ಬಂದಿಗಳ ಕುಂದು-ಕೊರತೆ ಹಾಗೂ ಸಮಸ್ಯೆಗಳ ಬಗ್ಗೆ ಹುಬ್ಬಳ್ಳಿ ಧಾರವಾಡ ಪೊಲೀಸ್ ಆಯುಕ್ತಾಲಯ ಘಟಕ ಸ್ಪಂದಿಸುತ್ತಾ ಬಂದಿದೆ ಎಂದು ಅವರು ತಿಳಿಸಿದರು.



ಹುಬ್ಬಳ್ಳಿ ಧಾರವಾಡ ಪೊಲೀಸ್ ಆಯುಕ್ತರಾದ ರೇಣುಕಾ ಸುಕುಮಾರ್ ಅವರು ಮಾತನಾಡಿ, ಕಳೆದ ಬಾರಿ 33 ಲಕ್ಷ 50 ಸಾವಿರ ಮೌಲ್ಯದ ಪೊಲೀಸ್ ಧ್ವಜಗಳನ್ನು ಹಂಚಿಕೆ ಮಾಡಲಾಗಿದ್ದು, ಈ ಸಾರಿ ಹೆಚ್ಚಿನ ಮೊತ್ತದ ಹಣ ಸಂಗ್ರಹಣೆಗೆ ಅಧಿಕಾರಿಗಳು ಮುತುವರ್ಜಿ ವಹಿಸಬೇಕು. 2023-24ರಲ್ಲಿ ನಿವೃತ್ತ ಪೊಲೀಸ್ ಅಧಿಕಾರಿಗಳ ಕಲ್ಯಾಣ ನಿಧಿ ಸಮಿತಿ ಸಭೆಗಳನ್ನು ಮಾಡಲಾಗಿದೆ. ನಿವೃತ್ತ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಯವರಿಗೆ ವೈದ್ಯಕೀಯ ವೆಚ್ಚಕ್ಕಾಗಿ ಸಹಾಯಧನವನ್ನು ರೂ. 5 ಲಕ್ಷ 18 ಸಾವಿರ ಹಾಗೂ ನಿಧನ ಹೊಂದಿದ ನಿವೃತ್ತ ಅಧಿಕಾರಿ ಹಾಗೂ ಸಿಬ್ಬಂದಿಗಳ ಅಂತ್ಯ ಸಂಸ್ಕಾರಕ್ಕಾಗಿ ರೂ. 1 ಲಕ್ಷದ 20 ಸಾವಿರ ಧನ ಸಹಾಯವನ್ನು ಮಂಜೂರು ಮಾಡಲಾಗಿದೆ. ಆರೋಗ್ಯ ಭಾಗ್ಯ ಯೋಜನೆಯಡಿಯಲ್ಲಿ ಏಪ್ರೀಲ್ 2023 ರಿಂದ ಮಾರ್ಚ 2024ರವರೆಗೆ ಒಟ್ಟು 652 ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ ಹಾಗೂ ಅರ್ಹ ಕುಟುಂಬ ಸದಸ್ಯರು ವೈದ್ಯಕೀಯ ಸೌಲಭ್ಯವನ್ನು ಪಡೆದಿರುತ್ತಾರೆ.

2023-24ರಲ್ಲಿ ಪೊಲೀಸರ ಮಕ್ಕಳ ಎಸ್.ಎಸ್.ಎಲ್.ಸಿ ಹಾಗೂ ನಂತರದ ಶೈಕ್ಷಣಿಕ ವಿದ್ಯಾಭ್ಯಾಸಕ್ಕಾಗಿ ರೂ. 15 ಲಕ್ಷ 7 ಸಾವಿರ ಮೊತ್ತದ ಶೈಕ್ಷಣಿಕ ಸಹಾಯ ಧನವನ್ನು ಒದಗಿಸಲಾಗಿದೆ. ಸೇವೆಯಿಂದ ವಯೋನಿವೃತ್ತಿ ಹೊಂದಿದ 42 ಸಿಬ್ಬಂದಿಗಳಿಗೆ ತಲಾ 5 ಸಾವಿರ ವೆಚ್ಚದಲ್ಲಿ ಬಿಳ್ಕೋಡುಗೆ ಸಮಾರಂಭವನ್ನು ಏರ್ಪಡಿಸಿ ಆತ್ಮೀಯವಾಗಿ ಸನ್ಮಾನಿಸಲಾಗಿರುತ್ತದೆ. ನಿವೃತ್ತ ಪೊಲೀಸ್ ಅಧಿಕಾರಿ ಹಾಗೂ ಸಿಬ್ಬಂದಿಗಳ ಸಂಘದಲ್ಲಿ ಇಲ್ಲಿಯವರೆಗೆ 370 ಜನರು ಸದಸ್ಯರಾಗಿರುವರು.

ನಿವೃತ್ತ ಪೊಲೀಸ್ ಸಿಬ್ಬಂದಿಗಳಿಗೆ ಆರೋಗ್ಯ ಯೋಜನೆ ಬಗ್ಗೆ ಅರಿವು ಮೂಡಿಸಬೇಕಾಗಿದೆ. ಅಲ್ಲದೇ ಸಂಘದ ಸದಸ್ಯರಾಗಲು ಪ್ರೇರಣೆ ನೀಡಬೇಕಿದೆ. ಪೊಲೀಸ್ ಧ್ವಜ ಮಾರಾಟದಿಂದ ಬರುವ ಹಣವನ್ನು ನಿವೃತ್ತ ಪೊಲೀಸ ಅಧಿಕಾರಿಗಳು, ಸಿಬ್ಬಂದಿ ಹಾಗೂ ಕುಟುಂಬದವರ ಶ್ರೇಯೋಭಿವೃದ್ಧಿಗೆ ವ್ಯಯಿಸಲಾಗುವುದು ಎಂದರು.

ಮಾರುತಿ ಹೆಗಡೆ ಅವರ ನೇತೃತ್ವದಲ್ಲಿ ವಿವಿಧ ಪಡೆಗಳು ಆಕರ್ಷಕ ಪಥ ಸಂಚಲನ ನಡೆಸಿದವು.

ಡಿಸಿಪಿಗಳಾದ ಯಲ್ಲಪ್ಪ ಕಾಶಪ್ಪನವರ, ಎಸಿಪಿಗಳಾದ ಆರ್.ಕೆ. ಪಾಟೀಲ, ವಿಜಯಕುಮಾರ ತಳವಾರ, ನಿವೃತ್ತ ಡಿಐಜಿಪಿ ರವಿಕುಮಾರ ನಾಯಕ, ನಿವೃತ್ತ ಡಿಸಿಪಿ ಎಚ್.ಎ. ದೇವರಹೊರು, ನಿವೃತ್ತ ಡಿಎಸ್‌ಪಿಗಳಾದ ಆರ್.ಐ.ಅಂಗಡಿ, ಪ್ರಭುದೇವ ಮಾನೆ, ಶಿವಶಂಕರ ಗಡಾದಿ, ವಿ.ಬಿ. ಬೆಳವಡಿ, ನಿವೃತ್ತ ಪಿಐ ಅರುಣಕುಮಾರ ಸಾಳುಂಕೆ, ನಿವೃತ್ತ ಪಿಎಸ್‌ಐ ಆರ್.ಬಿ. ನೀರಲಗಿ, ಎಸ್.ಎನ್.ಬಾಳಿಕಾಯಿ, ವಿ.ಎಸ್. ಅಂಗಡಿ, ಹುಬ್ಬಳ್ಳಿ ಧಾರವಾಡ ನಗರದ ನಿವೃತ್ತ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ, ಟ್ರಾಫಿಕ್ ವಾರ್ಡನ್, ಕುಟುಂಬಸ್ಥರು ಸೇರಿದಂತೆ ಇತರರು ಪಾಲ್ಗೊಂಡಿದ್ದರು.

ಹುಬ್ಬಳ್ಳಿ ಧಾರವಾಡ ನಗರ ಕಾನೂನು ಮತ್ತು ಸುವ್ಯವಸ್ಥೆ ಉಪ ಪೊಲೀಸ ಆಯುಕ್ತರಾದ ರಾಜೀವ ಎಂ. ಸ್ವಾಗತಿಸಿದರು. ಪೊಲೀಸ್ ಇನ್ಸಪೆಕ್ಟರ್ ಮಾರುತಿ ಗುಳ್ಳಾರಿ ನಿರೂಪಿಸಿದರು. ಹುಬ್ಬಳ್ಳಿ ಧಾರವಾಡ ನಗರ ಅಪರಾಧ ಮತ್ತು ಸಂಚಾರ ಉಪ ಪೊಲೀಸ ಆಯುಕ್ತರಾದ ರವೀಶ ಸಿ.ಆರ್. ವಂದಿಸಿದರು.

## ರಸ್ತೆ ನಿಯಮ ಪಾಲಿಸಿ: ಪಿಎಸ್‌ಆಯ್ ಯದ್ದಲಗುಡ್ಡ

**ಧಾರವಾಡ :** ನಿಮ್ಮಜೀವ ಸುರಕ್ಷತೆ ಇರಬೇಕೆಂದರೆ ರಸ್ತೆ ನಿಯಮಗಳನ್ನು ಪಾಲಿಸಿ ಎಂದು ಕಲಘಟಗಿ ತಾಲೂಕಿನ ಪಿ.ಎಸ್.ಆಯ್ ಬಸವರಾಜ ಯದ್ದಲಗುಡ್ಡಹೇಳಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘದ ಯುವಜನ ಮಂಟಪವು, ಕಲಘಟಗಿಯ ಎನ್.ಎಸ್.ಎಸ್. ವಾರ್ಷಿಕ ವಿಶೇಷ ಶಿಬಿರ ಗುಡ್‌ನ್ಯೂಜ್ ಪ್ರಥಮ ದರ್ಜೆಕಾಲೇಜಿನ ಸಹಯೋಗದಲ್ಲಿಕಲಘಟಗಿ ತಾಲೂಕಿನ ಗಂಭ್ಯಾಪುರ ಗ್ರಾಮದಲ್ಲಿ ಆಯೋಜಿಸಿದ್ದ ಜಾನಪದ ಸಂಭ್ರಮ' ಕಾರ್ಯಕ್ರಮದಲ್ಲಿಕಾನೂನು ಅರಿವು' ಕುರಿತು ಉಪನ್ಯಾಸ ನೀಡುತ್ತಾ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಅವರು, ಯುವಕರು ವಾಹನ ಚಲಾಯಿಸುವಾಗ ಕಡ್ಡಾಯವಾಗಿ ಹೆಲ್ಮೆಟ್ ಹಾಕಬೇಕು, ಕಾರು ಚಲಾಯಿಸುವಾಗ ಸಿಟ್ ಬೆಲ್ಟ ಹಾಕಬೇಕು. ಕಾನೂನುಗಳು ಇರುವುದು ಜನರ ಸುರಕ್ಷತೆಗಾಗಿ. ರಸ್ತೆ ಸುರಕ್ಷತಾ ಕ್ರಮಗಳನ್ನು ಪಾಲಿಸಿದರೆ ಎಲ್ಲರೂ ಸುರಕ್ಷಿತವಾಗಿ ಪ್ರಯಾಣ ಮಾಡಬಹುದು ಸೋಷಿಯಲ್ ಮಿಡಿಯಾಉಪಯೋಗಿಸುವವರು ಬಹಳ ಎಚ್ಚರಿಕೆಯಿಂದ ಇರಬೇಕು ಮತ್ತುಅನವಶ್ಯಕವಾಗಿ ಫೇಸ್ಬುಕ್, ಇನ್‌ಸ್ಟಾಗ್ರಾಮ ಮುಂತಾದ ಜಾಲತಾಣಗಳಲ್ಲಿ ಗೊತ್ತಿಲ್ಲದವರ ಜೊತೆಗೆ ಯಾವುದೆ ರೀತಿಯ ವ್ಯವಹಾರ ಇಟ್ಟುಕೊಳ್ಳಬಾರದು. ಯಾವುದೇ ವೆಬ್‌ಸೈಟ್‌ಗಳನ್ನು ಮತ್ತು ಲಿಂಕ್‌ಗಳನ್ನು ಅವುಗಳು ಅತೆಂಟಿಕ್ ಚೆಕ್ ಮಾಡದೆ ಒತ್ತಬಾರದು. ಹಾಗೆ ಮಾಡುವುದರಿಂದನಮ್ಮಖಾತೆಯಲ್ಲಿನಹಣಖದೀಮರುಕದಿಯುವುದಕ್ಕೆ ಅವಕಾಶ ನೀಡಿದಂತಾಗುತ್ತದೆ. ಅದಕ್ಕಾಗಿ ಮೊಬೈಲ್ ಬಳಸುವಾಗ ಅರವಿನೊಂದಿಗೆಬಳಸಿರಿಎಂದುಯುವಕರಿಗೆಕಿವಿಮಾತುಹೇಳಿದರು.

ಮುಖ್ಯ ಅತಿಥಿಗಳಾಗಿ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಡಾ.ಜಿನದತ್ತ ಹಡಗಲಿ, ಹಿಂದಿನ ಕೋಶಾಧ್ಯಕ್ಷರಾದ ಶಿವಾನಂದ




ಭಾವಿಕಟ್ಟಿ, ಇದ್ದರು. ಕಾರ್ಯಕಾರಿ ಸಮಿತಿ ಸದಸ್ಯರಾದ ಡಾ.ಮಹೇಶ ಧ. ಹೊರಕೇರಿಅವರುಪ್ರಾಸ್ತಾವಿಕವಾಗಿಮಾತನಾಡಿದರು.

ಕರ್ನಾಟಕ ವಿದ್ಯಾವರ್ಧಕ ಸಂಘದ ಪ್ರಧಾನ ಕಾರ್ಯದರ್ಶಿ ಶಂಕರ ಹಲಗತ್ತಿಅಧ್ಯಕ್ಷತೆ ವಹಿಸಿ ಮಾತನಾಡುತ್ತಾ, ವಿದ್ಯಾರ್ಥಿಗಳು ತಮ್ಮಗ್ರಾಮಕ್ಕೆ ಸ್ವಯಂಸೇವೆಸಲ್ಲಿಸಲುಆಗಮಿಸಿದಸಂದರ್ಭದಲ್ಲಿಅವರಜೊತೆಗೆಊರಿನ 'ಯುವಕರು ಕೈ ಜೊಡಿಸಿದರೆ ಒಂದುಗ್ರಾಮವನ್ನು ಮಾದರಿಗ್ರಾಮವನ್ನಾಗಿ ಮಾಡಬಹುದೆಂದರು. ಶಾಂತಲಾ ಸಂಶಿಮಠ ಹಾಗೂ ಸಂಗಡಿಗರು ಪ್ರಾರ್ಥಿಸಿದರು.ನೀಲಮ್ಮಕಲಕೇರಿಕಾರ್ಯಕ್ರಮ ನಿರೂಪಿಸಿದರು. ಸಮಾರಂಭದಲ್ಲಿಎನ್.ಎಸ್.ಎಸ್. ಕಾರ್ಯಕ್ರಮಾಧಿಕಾರಿ ಮಹಾದೇವ ಉಳ್ಳಾಗಡ್ಡಿ, ಉಪನ್ಯಾಸಕಾರದಅಕ್ಷತಾ ಕುಬಿಹಾಳ, ಎನ್.ಎಂ.ನಿಂಬಣ್ಣವರ, ರೆಹಮಾನಸಾಬ ಗೋಳಲ್ಲಿ ಹಾಗೂ ಸ್ವಯಂ ಸೇವಕರುಊರಿನಹಿರಿಯರು,ಮಹಿಳೆಯರುಭಾಗವಹಿಸಿದ್ದರು.

ನಂತರ ಹರ್ಲಾಪುರದ ಶಂಭಯ್ಯ ಹಿರೇಮಠ, ಸಿ.ವಾಯ್.ಸಿ.ಡಿ ಕಲಾ ಸಂಘ, ಹರ್ಲಾಪೂರ ಹಾಗೂ ತಂಡದವರುಜಾನಪದ ಸಂಭ್ರಮದಲ್ಲಿ ಅನೇಕ ಜಾಗೃತಿ ಗೀತೆಗಳನ್ನು ಹಾಡುವುದರೊಂದಿಗೆರೈತಗೀತೆ ಮತ್ತು ಹಾಸ್ಯಕಾರ್ಯಕ್ರಮನಡೆಸಿಕೊಟ್ಟುಪ್ರೇಕ್ಷಕರನ್ನುರಂಜಿಸಿದರು.

## ಸೆಕ್ಟರ್ ಅಧಿಕಾರಿಗಳು ಸೇತುವೆಯಂತೆ ಕಾರ್ಯ ನಿರ್ವಹಿಸಿ

**ಧಾರವಾಡ :** ಚುನಾವಣಾ ಕಾರ್ಯಗಳು ನಿಯಮಾನುಸಾರ ನಡೆಯುವಲ್ಲಿ ಸೆಕ್ಟರ್ ಅಧಿಕಾರಿಗಳ ಪಾತ್ರ ಬಹು ಮುಖ್ಯವಾಗಿದೆ. ಅವರು ಚುನಾವಣಾಧಿಕಾರಿಗೂ (ಆರ್.ಓ) ಮತ್ತು ಮತಗಟ್ಟೆಯಲ್ಲಿನ ಪಿ.ಆರ್.ಓ ಅಧಿಕಾರಿಗೂ ಸಂಪರ್ಕ ಸೇತುವೆಯಾಗಿ ಕಾರ್ಯ ನಿರ್ವಹಿಸುತ್ತಾರೆ ಎಂದು ಜಿಲ್ಲಾ ಚುನಾವಣಾಧಿಕಾರಿಗಳು ಆಗಿರುವ ಜಿಲ್ಲಾಧಿಕಾರಿ ದಿವ್ಯ ಪ್ರಭು ಅವರು ಹೇಳಿದರು.

ಅವರು ಜಿಲ್ಲಾ ಚುನಾವಣಾ ಅಧಿಕಾರಿಗಳ ಕಾರ್ಯಾಲಯದಿಂದ ಆಯೋಜಿಸಿದ್ದ ಧಾರವಾಡ ಲೋಕಸಭಾ ಚುನಾವಣೆ-2024ರ ಸೆಕ್ಟರ್ ಅಧಿಕಾರಿಗಳಿಗೆ, ತಾಲೂಕ ಮಟ್ಟದ ಚುನಾವಣಾ ಸಂಪನ್ಮೂಲ ವ್ಯಕ್ತಿಗಳಿಗೆ ಮತ್ತು ತರಬೇತಿ ನೀಡುವ ಸಂಪನ್ಮೂಲ ವ್ಯಕ್ತಿಗಳ ತರಬೇತಿ ಕಾರ್ಯಗಾರದ ಅಧ್ಯಕ್ಷತೆ ವಹಿಸಿ, ಮಾತನಾಡಿದರು. ಚುನಾವಣೆಯಲ್ಲಿ ನಮ್ಮ ನಮ್ಮ ಕಾರ್ಯಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸುವ ಮೂಲಕ ಚುನಾವಣೆಯನ್ನು ಯಶಸ್ವಿಗೊಳಿಸಬೇಕು. ಇದು ಎಲ್ಲರೂ ಸೇರಿ ಒಟ್ಟಾಗಿ ಕೆಲಸ ಮಾಡುವ ಸಂದರ್ಭವಾಗಿದೆ. ತರಬೇತಿಯಲ್ಲಿ ನೀಡುವ ಮಾಹಿತಿಯನ್ನು ಸರಿಯಾಗಿ ತಿಳಿದು, ತಮ್ಮ ಕರ್ತವ್ಯಗಳನ್ನು



ನಿರ್ವಹಿಸಬೇಕು ಎಂದು ಅವರು ಹೇಳಿದರು.

ಜಿಲ್ಲೆಯಲ್ಲಿ 1660 ಮತಗಟ್ಟೆಗಳಿದ್ದು, ಪ್ರತಿ ಮತಗಟ್ಟೆಯ ಪಿ.ಆರ್.ಓ ಮತ್ತು ಎಪಿ.ಆರ್.ಓ.ಗಳು ಮತಗಟ್ಟೆಯಲ್ಲಿ ತಾವು ನಿರ್ವಹಿಸಬೇಕಾದ ಪ್ರತಿ ಕರ್ತವ್ಯದ ಬಗ್ಗೆ ಮನದಟ್ಟು ಹೊಂದಬೇಕು. ಅವರಿಗೆ ಅಗತ್ಯವಿರುವ ಮಾಹಿತಿ, ತರಬೇತಿಯನ್ನು ಸೆಕ್ಟರ್ ಅಧಿಕಾರಿಗಳು, ಸಂಪನ್ಮೂಲ ವ್ಯಕ್ತಿಗಳು ಮಾಡಬೇಕೆಂದು ಅವರು ಹೇಳಿದರು.

ಭಾರತ ಚುನಾವಣಾ ಆಯೋಗ ನೀಡಿರುವ ನೀರ್ದೇಶಗಳನ್ನು ಚುನಾವಣಾ ಕರ್ತವ್ಯದಲ್ಲಿ ತೊಡಗಿಸಿಕೊಂಡಿರುವ ಪ್ರತಿ ಅಧಿಕಾರಿ ಮತ್ತು ಸಿಬ್ಬಂದಿತಮ್ಮಕರ್ತವ್ಯದಲ್ಲಿಅಳವಡಿಸಿಕೊಂಡು ಪಾಲಿಸಬೇಕು. ತಮ್ಮ ಕರ್ತವ್ಯ ನಿರ್ವಹಣೆ ಸಂದರ್ಭದಲ್ಲಿಯಾವುದೇರೀತಿಯಗೊಂದಲ ಅಥವಾ ತೊಂದರೆ ಉಂಟಾದರೆ ತಕ್ಷಣ ತಮ್ಮ ಮೇಲಾಧಿಕಾರಿಗಳನ್ನು ಸಂಪರ್ಕಿಸಿ, ಅವುಗಳನ್ನು ಪರಿಹರಿಸಿಕೊಳ್ಳುವಂತೆ ತಿಳಿಸಬೇಕು ಎಂದು ಅವರು ಹೇಳಿದರು.

ಸೆಕ್ಟರ್ ಅಧಿಕಾರಿಗಳು ಪಿ.ಆರ್.ಓ.ಗಳಿಗೆ ಅಗತ್ಯ ಮಾಹಿತಿ, ತರಬೇತಿ ನೀಡಿ ಚುನಾವಣಾ ಕರ್ತವ್ಯಕ್ಕೆ ಸಿದ್ಧಗೋಳಿಸಬೇಕೆಂದು ಅವರು ತಿಳಿಸಿದರು. ಹುಬ್ಬಳ್ಳಿ ಹೆಸ್ಕಾಂ ಪ್ರಧಾನ ವ್ಯವಸ್ಥಾಪಕರಾದ ಹಿರಿಯ ಕೆಎಎಸ್ ಅಧಿಕಾರಿ ಸಿದ್ದು ಹುಲ್ಲೋಳಿ ಅವರು ಎಲ್ಲ ಸೆಕ್ಟರ್ ಅಧಿಕಾರಿಗಳಿಗೆ ಪ್ರಾತ್ಯಕ್ಷಿಕೆ ಮೂಲಕ ತರಬೇತಿ ನೀಡಿದರು. ಇಂದಿನ ತರಬೇತಿಯಲ್ಲಿ 280 ಜನ ವಿವಿಧ ಅಧಿಕಾರಿಗಳು ಭಾಗವಹಿಸಿದ್ದರು.

# ರೇಣುಕಾಚಾರ್ಯರ ಜಯಂತಿ ಯಶಸ್ವಿಯಾಗಿ ಆಚರಣೆ



**ವಿಜಯಪುರ :** ದಿನಾಂಕ 23 ಮಾರ್ಚ್ 2024 ಶನಿವಾರದಂದು ಮುಂಜಾನೆ 11:00ಗೆ ಶ್ರೀ ಪವಾಡ ಬಸವೇಶ್ವರ ದೇವಸ್ಥಾನದಲ್ಲಿ ರೇಣುಕರ ಉದ್ಘೋಷದೊಂದಿಗೆ ವೈದಿಕರ ಮಂತ್ರ ಘೋಷಣೆದೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು ರೇಣುಕಾಚಾರ್ಯರ ಕುರಿತು ಉಪನ್ಯಾಸ ನೀಡಿದ ಶ್ರೀ ವಿರುಪಾಕ್ಷ ದೇವರು ಗೊರನಾಳ ಅವರು ಮಾತನಾಡುತ್ತಾ 12ನೇ ಶತಮಾನದಲ್ಲಿಯ ಶರಣರ ವಚನದಲ್ಲಿರುವ ಮೌಲ್ಯಗಳನ್ನು ನಾವು ಕ್ರಿಸ್ತ ಶಕ ಪೂರ್ವ ದಲ್ಲಿ ರಚನೆಯಾದ ಸಿದ್ಧಾಂತ ಶಿಖಾಮನಿಯಲ್ಲಿ ಕಾಣಬಹುದು ವೀರಶೈವ ಧರ್ಮ ಮಾನವ ಕುಲ ಒಂದೇ ಎಂದು ಭೋದಿಸುತ್ತದೆ ಬಸವಣ್ಣವರು ಜಾತಿ ಜಾತಿಗಳಲ್ಲಿಯ ವೈಶಮ್ಯಗಳನ್ನು ಹೊಡೆದೋಡಿಸಬೇಕೆಂಬ ಇಚ್ಛೆಯಿಂದ ಅನುಭವ ಮಂಟಪ ಸ್ಥಾಪಿಸಿ ಶರಣ-ರ ವಿಚಾರಧಾರೆಗಳನ್ನು ಜನರಲ್ಲಿ ಹಾಸು ಹೊಕ್ಕಾಗಲು ಪ್ರಯತ್ನಿಸಿದರು ಆದರೆ ಇಂದು ಜಾತಿ ಜಾತಿಗಳಿಗೆ ಒಬ್ಬ ಸ್ವಾಮಿ ತಮ್ಮತಮ್ಮಜಾತಿಗಳಬಗ್ಗೆಚಿಂತನೆ ನಡೆದಿದೆ ಮಾನವ ಕುಲವೊಂದೇ ಎಂಬುದು ಮಾಸುತಿದೆ ಇವತ್ತಿನ ದಿವಸ ಬಸವಣ್ಣನವರು ಹೆಚ್ಚು ಪ್ರಚಾರದಲ್ಲಿ ಬರಲು ಅವರ ಪ್ರತಿರೂಪ ಭಾವಚಿತ್ರಗಳು ಕಲಾ ಕೃತಿಗಳು ಕಾರಣ ಅದರಂತೆ ನಾವು ರೇಣುಕಾಚಾರ್ಯರು ಜನರ ಮನಸ್ಸಿನಲ್ಲಿ ಉಳಿಯಬೇಕಾದರೆ ಅವರ ಪ್ರತಿರೂಪದ ಭಾವಚಿತ್ರ ಹಾಗೂ ಕಲಾ ಕೃತಿಗಳನ್ನು ಸಭೆ ಸಮಾರಂಭಗಳಲ್ಲಿ ಮದುವೆ ಮುಂಜಿಗಳಲ್ಲಿ ಉಡುಗ-ಾರೆ ನೀಡುವ ಮೂಲಕ ಅವರ ಬಗ್ಗೆ ಹೆಚ್ಚಿನ ಪ್ರಚಾರ ಪ್ರಚಾರ ಮಾಡಿದರೆ ಜನರ ಮನಸ್ಸಿನಲ್ಲಿ ಉಳಿಯುವರು ಈ ಕಾಯಕವನ್ನು ಎಲ್ಲರೂ ಮಾಡಬೇಕೆಂದು ಸೂಚಿಸಿದರು ಸಾನಿಧ್ಯವನ್ನು ವಹಿಸಿದ ಉಕ್ಕಲಿ ರಸ್ತೆಯಲ್ಲಿರುವ ಜಾಲಹಳ್ಳಿ ಮಠದ ರವಿಕಿರಣ ದೇವರು ಮಾತನಾಡುತ್ತಾ ಸದ್ಭಕ್ತರು ಲಿಂಗ ಪೂಜೆ ಲಿಂಗೋದಕ ಪಡೆ-ಯುತ್ತಾ ಸದ್ಗತಿ ಹೊಂದಬೇಕು 13ನೇ ಶತಮಾನದ ಪೂರ್ವದಲ್ಲಿ ಶೈವ ಸಂಸ್ಕೃತಿ ಚಾಲ್ತಿಯಲ್ಲಿತ್ತು ಆಗಿನ ಜನರು ಲಿಂಗ ಪೂಜಾ ನಿಷ್ಠರಾಗಿದ್ದರು ಎಂದು ಹೇಳಿದರು ಅಧ್ಯಕ್ಷತೆ ವಹಿಸಿ ಮಾತನಾಡಿದ ಸಂಜೀವ್ ಹಿರೇಮಠ ಅವರು ಸರ್ಕಾರವು ಸಂವಿಧಾನ ಕೊಡುಗೆ ನೀಡಿದ ಜಾತಿ ಪ್ರಮಾಣ ಪತ್ರವನ್ನು ಸರಳಿಕರಿಸಿ ನೀಡುವುದು ಹಾಗೂ ಬಡಜಂಗಮರ ಉದ್ಧಾರಕ್ಕಾಗಿ ಜಂಗಮ ಅಭಿವೃದ್ಧಿ ನಿಗಮವನ್ನು ಸ್ಥಾಪಿಸುವುದು ಪ್ರತಿ ಗ್ರಾಮದಲ್ಲಿ ಜಂಗಮ ಸಮುದಾಯ ಭವನವನ್ನು ನಿರ್ಮಿಸುವುದು ಈ ಎಲ್ಲ ಬೇಡಿಕೆಗಳನ್ನು ಅನುಷ್ಠಾನಗೊಳಿಸಲು ಮನವಿ ಮಾಡಿದರು ಈ ಹಿಂದೆ ಸಿದ್ದರಾಮಯ್ಯ ಸರ್ಕಾರದಲ್ಲಿಯೇ ನಮ್ಮ ಜಂಗಮ ವಿದ್ಯಾರ್ಥಿಗಳಿಗೆ ಶ್ರೀ ಶ್ರೀ ಆಂಜನೇಯ ಮಂತ್ರಿಗಳು ಸಮಾಜ ಕಲ್ಯಾಣ ಇಲಾಖೆ ಹೊಂದಿದಾಗ ಶಿಷ್ಯ ವೇತನವನ್ನು ನೀಡಿದ ಉದಾರಣೆಗಳು ಸಾಕಷ್ಟು ಇವೆ ಬಿಜೆಪಿ ಸರ್ಕಾರ ಜಾತಿ ಪ್ರಮಾಣ ಪತ್ರ ಸರಳಿಕರಣ ಮಾಡುವುದಾಗಿ ಹೇಳಿ ಮಾತು ತಪ್ಪಿತು ಸಿದ್ದರಾಮಯ್ಯ ಸರ್ಕಾರ ನಮ್ಮ

ಈ ಎಲ್ಲ ಬೇಡಿಕೆಗಳನ್ನು ಈಡೇರಿಸಿ ತಮ್ಮ ಹೆಸರು ಚಿರಸ್ಥಾಯಿ ಮಾಡಿಕೊಳ್ಳಬೇಕು ಇಂದಿನ ಸಭೆಯಲ್ಲಿ ಮಹಾನಗರ ಪಾಲಿಕೆಯ ಸದಸ್ಯರಾದ ಶ್ರೀ ರಾಜಶೇಖರ್ ಮಗಿಮಠ ಮತ್ತು ಉಷಾದೇವಿ ಹಿರೇಮಠ ಲಕ್ಷ್ಮೇಶ್ವರ ಜಂಗಮರ ಕುರಿತು ಮಾತನಾಡಿದರು ಮುಖ್ಯ ಅತಿಥಿಗಳಾಗಿ ಆಗಮಿಸಿದ ಷ ಬ್ರ ಸೋಮನಾಥ ಶಿವಾಚಾರ್ಯರು ಹಿರೇಮಠ ಕಣ್ಣೂರ್ ಹಾಗೂ ಗುಡ್ಡಾಪುರದ ಶಿವಾಚಾರ್ಯರು ಆಶೀರ್ವಚನ ನೀಡಿದರು ಈ ಸಭೆಯಲ್ಲಿ ಪವಾಡ ಬಸವೇಶ್ವರ ದೇವಸ್ಥಾನದ ಟ್ರಸ್ಟ ಅಧ್ಯಕ್ಷರಾದ ಬಸಪ್ಪ ಇಜೇರಿ ಜಂಗಮ ಸಮಾಜದ ಹಿರಿಯರಾದ ಬಸಯ್ಯ ಚಿನ್ನ ಕಾಳಿ ಮಠ ಡಾಕ್ಟರ್ ನಂದಿ ಕೋಲ ಮಠ ಡಾಕ್ಟರ್ ಪ್ರಸಾದ ವಸ್ತ್ರದ ಸಿದ್ದಯ್ಯ ಹಿರೇಮಠ ಹೊನ್ನಳ್ಳಿ ಮಲ್ಲಯ್ಯ ಹಿರೇಮಠ ರಾಚಯ್ಯ ಮಠಪತಿ ಗುರಯ್ಯ ಯಾದವಾಡ ಮಠ ರಾಚಯ್ಯ ಚೌಕಿಮಠ ನಿಂಗಯ್ಯ ಯಾದವಾಡ ಮಠ ಗುರು ಸಿದ್ದಯ್ಯ ಹಿರೇಮಠ ನಂಜುಂಡಿ ಮಠಪತಿ ಬಸಯ್ಯನವರು ಹಿರೇಮಠ ಜಾಲಹಳ್ಳಿ ಮಠ ಅಶೋಕ್ ಮಹಾಂತಮಠ ವಿಶ್ವನಾಥ್ ಹಿರೇಮಠ ಮಹೇಶ್ ಹಿರೇಮಠ ಪವಾಡ ಬಸವೇಶ್ವರ ಮಹಿಳಾ ಮಂಡಳದ ಸದಸ್ಯರು ನೂರಾರು ಜಂಗಮ ಬಂಧುಗಳು ಮಾತೆಯರು ಇವತ್ತಿನ ಸಭೆಗೆ ಸಾಕ್ಷಿಯಾಗಿದ್ದರು ಕಾರ್ಯಕ್ರಮದ ನಿರೂಪಣೆ ಜಿಲ್ಲಾ ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಎಸ್ ಕೆ ಸಾವಳಗಿಮಠ ಮಾಡಿದರು ಸ್ವಾಗತವನ್ನು ಕೋರಿದವರು ಜಿಲ್ಲಾ ನೌಕರ ಸಂಘದ ಅಧ್ಯಕ್ಷರಾದ ಶ್ರೀ ಬಿ ಐ ಹಿರೇಮಠ ವಂದನಾರ್ಪಣೆಯನ್ನುಸದಾಶಿವ ಅರಿಕೇರಿ ಮಠ ನಡೆಸಿಕೊಟ್ಟರು.

## ಭೌತಿಕ ಬದುಕು ಸಮೃದ್ಧಗೊಂಡಂತೆ ಆಂತರಿಕ ಬದುಕು ಪರಿಶುದ್ಧಗೊಳ್ಳಬೇಕು: ಶ್ರೀ ರಂಭಾಪುರಿ ಜಗದ್ಗುರುಗಳು

**ಶಾಂತಪುರ (ಸೊರಬ) :** ಆಧುನಿಕ ಕಾಲದಲ್ಲಿ ಮಾನವೀಯ ಸಂಬಂಧಗಳು ಶಿಥಿಲಗೊಳ್ಳುತ್ತಿವೆ. ಮನುಷ್ಯನಿಗೆ ಮಾನಸಿಕ ಶಾಂತಿ ಸಂತೃಪ್ತಿ ಇಲ್ಲದಂತಾಗಿದೆ. ಭೌತಿಕ ಬದುಕುಸಮೃದ್ಧಗೊಂಡಂತೆಆಂತರಿಕಬದುಕು ಪರಿಶುದ್ಧಗೊಳ್ಳಬೇಕೆಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.




ಅವರು ರವಿವಾರ ಸೊರಬ ತಾಲೂಕಿನ ಶಾಂತಪುರ ಸಂಸ್ಥಾನ ಹಿರೇಮಠದಲ್ಲಿ ಜರುಗಿದ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಹಾಗೂ ಜಾತ್ರಾ ಮಹೋತ್ಸವ ಧರ್ಮ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿದ್ದರು. ಬೆಲೆಯುಳ್ಳ ಬದುಕಿಗೆ ಸಂಸ್ಕಾರ ಮುಖ್ಯ. ಸಾಮಾಜಿಕ ಸಂಪ್ರದಾಯಗಳು ಬದಲಾಗಬಹುದು.ಆದರೆನೈತಿಕನಿಯಮಗಳು ಶಾಶ್ವತವಾಗಿರುತ್ತವೆ. ಮನುಷ್ಯನಲ್ಲಿ ಕರ್ತವ್ಯ, ಶಿಸ್ತು, ಶ್ರದ್ಧೆ, ಛಲ ಮತ್ತು ಸಮರ್ಪಣಾ ಮನೋಭಾವ ಬೆಳೆದುಕೊಂಡು ಬರುವ ಅವಶ್ಯಕತೆಯಿದೆ. ತನಗಾಗಿ ಬಯಸುವುದು ಜೀವ ಗುಣ. ಎಲ್ಲರಿಗಾಗಿ ಬಯಸುವುದು ದೇವ ಗುಣ. ಭೌತಿಕ ಬದುಕಿಗೆ ಆಧ್ಯಾತ್ಮ ಜ್ಞಾನದ ಅರಿವು ಮುಖ್ಯವೆಂಬುದನ್ನು ಶ್ರೀ ಜಗದ್ಗುರು ರೇಣುಕಾಚಾರ್ಯರು ನಿರೂಪಿಸಿದ್ದಾರೆ. ಅಂಗ ಅವಗುಣ ದೂರ ಮಾಡಿ ಲಿಂಗ ಗುಣ ಬೆಳೆಸಲು ವೀರಶೈವ ಧರ್ಮ ಸದಾ ಶ್ರಮಿಸಿದೆ. ಜ್ಞಾನ ಕ್ರಿಯಾತ್ಮಕವಾದ ಬದುಕಿನೊಂದಿಗೆ ಸಾಮಾಜಿಕ ಚಿಂತನೆಗೈದ ಕೀರ್ತಿ ಶ್ರೀ ಜಗದ್ಗುರು ರೇಣುಕಾಚಾರ್ಯರಿಗೆ ಸಲ್ಲುತ್ತದೆ. ಶಾಂತಪುರ ಸಂಸ್ಥಾನ ಹಿರೇಮಠದ ಶಿವಾನಂದ ಶಿವಾಚಾರ್ಯ ಸ್ವಾಮಿಗಳು ಭಕ್ತರ ಸಹಕಾರದಿಂದ ಪ್ರತಿ ವರುಷ ಜಯಂತ್ಯುತ್ಸವ ಆಚರಿಸುತ್ತಿರುವುದು ಸಂತೋಷ ತಂದಿದೆ ಎಂದರು.

ಮಾಜಿಜಿ.ಪಂ.ಸದಸ್ಯಗಿರೀಶಸಮಾರಂಭವನ್ನು ಉದ್ಘಾಟಿಸಿದರು. ಪವಿತ್ರ ಸಮಾರಂಭದಲ್ಲಿ ಮಳಲಿ ಮಠದ ಡಾ.ನಾಗಭೂಷಣ ಶ್ರೀಗಳು, ಜಡೆ ಡಾ.ಮಹಾಂತ ಶ್ರೀಗಳು, ಸಂಗೊಳ್ಳಿ ಗುರುಲಿಂಗ ಶ್ರೀಗಳು, ಕುರುವತ್ತಿ ನಂದೀಶ್ವರ ಶ್ರೀಗಳು, ಲಕ್ಕವಳ್ಳಿ ಜೈನ ಮಠದ ಶ್ರೀಗಳು, ತಿರುಮಲಕೊಪ್ಪದ ದಾನ್ಯ ದೇವರು ಪಾಲ್ಗೊಂಡು ನುಡಿ ನಮನ ಸಲ್ಲಿಸಿದರು.

ನೇತೃತ್ವ ವಹಿಸಿದ ಶಾಂತಪುರ ಮಠದ ಶಿವಾನಂದ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ ಸಂಸ್ಕಾರ ಸಂಸ್ಕೃತಿ ಇಲ್ಲದ ಮನುಷ್ಯನ ವ್ಯಕ್ತಿತ್ವಕ್ಕೆ ಬೆಲೆಯಿಲ್ಲ. ಅರಿವುಳ್ಳ ಜನ್ಮದಲ್ಲಿ ಬಂದು ಗುರು ಕಾರುಣ್ಯ ಪಡೆದು ಬಾಳಲು ಶ್ರಮಿಸಬೇಕು. ಶ್ರೀ ಜಗದ್ಗುರು ರೇಣುಕಾಚಾರ್ಯರ ಚಿಂತನೆಗಳು ಸಕಲರ ಬಾಳಿನಲ್ಲಿ ಬೆಳಕು ತೋರುತ್ತವೆ ಎಂದರು. ಸಮಾರಂಭದ ಅಧ್ಯಕ್ಷತೆ ವಹಿಸಿದ ಬನ್ನಿಕೊಪ್ಪದ ಡಾ॥ ಸುಜ್ಞಾನ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ ಮಾನವ ಜೀವನಕ್ಕೆ ಧರ್ಮ ದಿಕ್ಸೂಚಿ. ಜೀವನದಲ್ಲಿ ಗುರಿ ಮತ್ತು ಗುರು ಆಶ್ರಯಿಸಿ ಬದುಕಿನಲ್ಲಿ ಶ್ರೇಯಸ್ಸು ಕಾಣಬೇಕು. ಶ್ರೀ ಜಗದ್ಗುರು ರೇಣುಕಾಚಾರ್ಯರ ವಿಚಾರ ಧಾರೆಗಳು ಎಲ್ಲರ ಬಾಳಿನಲ್ಲಿ ಸ್ಫೂರ್ತಿ ತರುತ್ತವೆ ಎಂದರು. ಸಾಗರದ ಪಂಚಾಕ್ಷರಯ್ಯನವರು ವೀರಶೈವ ಧರ್ಮದ ಹಿರಿಮೆ ಮತ್ತು ಗುರು ಮಹಿಮೆ ಕುರಿತು ಉಪನ್ಯಾಸವನ್ನಿತ್ತರು. ಸದಾನಂದಗೌಡ್ರು ಬಳಗಲಿ, ಜಡೆ ಕೆ.ಬಂಗಾರಪ್ಪಗೌಡ್ರು ಮೊದಲಾದ ಗಣ್ಯರು ಉಪಸ್ಥಿತರಿದ್ದರು. ಕಾಳಂಗಿ ಮತ್ತು ಅಗಸನಹಳ್ಳಿ ಭಜನಾ ಮಂಡಳಿಯಿಂದ ಪ್ರಾರ್ಥನಾ ಗೀತೆ ಜರುಗಿತು. ಬಂಕವಳ್ಳಿ ಬಿ.ವೀರೇಂದ್ರಗೌಡ ನಿರೂಪಿಸಿದರು. ಕುಬಟೂರಿನ ಗಿರೀಶ ಸಹೋದರರು ಪ್ರಸಾದ ಸೇವೆ ಸಲ್ಲಿಸಿದರು.

## ಸ್ವಾಮಿ ವಿವೇಕಾನಂದ ಶಾಲೆಗೆ ದೇಣಿಗೆ




**ಬೆಳಗಾವಿ :** ನಗರದ ಪ್ರಯತ್ನ ಸಂಘಟನೆಯವರು ದಿ. 28 ಗುರುವಾರದಂದು ಖಾನಾಪುರದಲ್ಲಿರುವ ಸ್ವಾಮಿ ವಿವೇಕಾನಂದ ಇಂಗ್ಲೀಷ್ ಮೀಡಿಯಂ ಶಾಲೆಗೆ ಹೋಗಿ ಶಾಲೆಯ ಅವಶ್ಯಕತೆಗೆ ಅನುಗುಣವಾಗಿ ಶಾಲೆಯ ಹೊಸ ಕಟ್ಟಡಕ್ಕಾಗಿ ರೂ. 30000/- ಮೌಲ್ಯದ 6 ದೊಡ್ಡ ಗೋಡೆ ಫ್ಯಾನ್ ಗಳನ್ನು ದೇಣಿಗೆಯಾಗಿ ಕೊಟ್ಟರು.

ಈ ಸಂದರ್ಭದಲ್ಲಿ ಶಾಲೆಯ ಅಧ್ಯಕ್ಷರು ಶ್ರೀ ಚೇತನ್ ಮ್ಹನೇರಿಕರ್ ಹಾಗು ಪದಾಧಿಕಾರಿಗಳು ತಮ್ಮ ಶಾಲೆಯ ಬಗ್ಗೆ ಮಾಹಿತಿ ನೀಡಿದರು. ಪ್ರಯತ್ನ ಸಂಘಟನೆಯ ಅಧ್ಯಕ್ಷೆ ಶಾಂತಾ ಆಚಾರ್ಯ ಸಂಸ್ಥೆ ನಡೆದು ಬಂದ ದಾರಿಯ ಬಗ್ಗೆ ವಿವರಿಸಿದರು.

ವೆಂಕಟೇಶ್ ಸರ್ನೋಬತ, ಗೌರಿ, ಬೀನಾ, ಪದ್ಮಾ,ಸುಮಾ, ಸುನೀತ, ಶುಭಾ, ರೂಪ ಮೊದಲಾದವರು ಉಪಸ್ಥಿತರಿದ್ದರು.

## ಆರೋಗ್ಯ ಮತ್ತು ಆಧ್ಯಾತ್ಮಿಕ ಅರಿವು ಕಾರ್ಯಕ್ರಮ
# ಮನಸ್ಸು ಸ್ವಚ್ಛವಾಗಿಟ್ಟುಕೊಳ್ಳಿ: ಸಹಜಾನಂದಶ್ರೀ




**ಮಹಾಲಿಂಗಪುರ :** ನಮ್ಮ ಸ್ವರೂಪವನ್ನು ತಿಳಿಸಿಕೊಡುವ ಕನ್ನಡಿ ಸ್ವಚ್ಛಇದ್ದರೆ ನಮ್ಮ ಮುಖ ಕಾಣಿಸುತ್ತದೆ. ಆದರೆ, ಕನ್ನಡಿ ಸ್ವಚ್ಛಇರದಿದ್ದರೆ ನಮ್ಮ ಮುಖ ಕಾಣಿಸುವುದಿಲ್ಲ. ಅದೇರೀತಿ ನಮ್ಮ ಮನಸ್ಸಿನಲ್ಲಿರುವ ಪರಮಾತ್ಮಕಾಣಿಸಬೇಕೆಂದರೆ ನಮ್ಮ ಮನಸ್ಸು ಸ್ವಚ್ಛವಾಗಿಟ್ಟುಕೊಳ್ಳಬೇಕು ಎಂದುಸಿದ್ಧಾರೂಢ ಬ್ರಹ್ಮವಿದ್ಯಾಶ್ರಮದ ಸಹಜಾನಂದ ಸ್ವಾಮೀಜಿಹೇಳಿದರು.

ಪಟ್ಟಣದ ಸಿದ್ಧಾರೂಢ ಬ್ರಹ್ಮವಿದ್ಯಾಶ್ರಮದಲ್ಲಿ ಸಿ.ಎಂ.ಹುರಕಡ್ಲಿ ಫೌಂಡೇಶನ್ ಸಹಯೋಗದಲ್ಲಿ ಹಮ್ಮಿಕೊಂಡಿರುವ ಆರೋಗ್ಯ ಮತ್ತು ಆಧ್ಯಾತ್ಮಿಕ ಅರಿವು ಕಾರ್ಯಕ್ರಮದ ಆಶೀರ್ವಚನ ನೀಡಿದರು. ನಮ್ಮ ಮನಸ್ಸಿನಲ್ಲಿ ಪರಮಾತ್ಮನನ್ನು ತುಂಬಬೇಕಾಗುತ್ತದೆ.ಮನಸಿನ ಪರಿಶುದ್ಧತೆಗೆ ಪ್ರಾಣಾಯಾಮ ಅಗತ್ಯ.ಆಹಾರ ಶುದ್ಧಇದ್ದರೆ ಅಂತಕರಣ ಶುದ್ಧವಾಗುತ್ತದೆ.ಮನಸ್ಸಿಟ್ಟು ಮಾಡಿದರೆ ಪರಮಾತ್ಮ ಪ್ರಕಟವಾಗುತ್ತಾನೆ ಎಂದರು.

ಹುಮಾಯೂನ ಸುತಾರ ಮಾತನಾಡಿ, ಶರೀರಕ್ಕೆ ಆಹಾರದಿಂದ ಶಕ್ತಿ ಸಿಗುತ್ತದೆ. ಅದೇ ಆಹಾರವನ್ನು ನಿಯಂತ್ರಿಸಿದರೆ ಅದರಿಂದಾಗುವ ಕೆಟ್ಟ ಕೆಲಸಗಳು ನಿಲ್ಲುತ್ತವೆ. ಅದಕ್ಕೆ ಉಪವಾಸ ಉತ್ತಮ ಪ್ರಕ್ರಿಯೆಯಾಗಿದೆ ಎಂದರು.

ಮನಗುಂಡಿಯ ಮಹಾಮನೆಯ ಬಸವಾನಂದ ಸ್ವಾಮೀಜಿ ಪ್ರವಚನ ನೀಡಿದರು.ಸಿದ್ಧಾನಂದ ಭಾರತಿ ಸ್ವಾಮೀಜಿ, ಯೋಗಗುರು ಮಹಾಂತೇಶ ಹಿರೇಮಠ, ಫೌಂಡೇಶನ್ ಸಂಸ್ಥಾಪಕ ಚನಬಸು ಹುರಕಡ್ಲಿ ಇದ್ದರು.ಕಾರ್ಯಕ್ರಮದಲ್ಲೇ ಬಸವಾನಂದ ಸ್ವಾಮೀಜಿ ಅವರ ಚಿತ್ರ ರಚಿಸಿ ಶಿವಾನಂದ ನೀಲನ್ನವರ ಗಮನಸೆಳೆದರು.

ಹತ್ತು ದಿನದ ನಿಸರ್ಗಚಿಕಿತ್ಸಾ ಶಿಬಿರದಲ್ಲಿ ಜೇನುತುಪ್ಪ ಹಾಗೂ ಲಿಂಬೆಹಣ್ಣು, ಸ್ಪಿರುಲಿನಾ ಮಾತ್ರೆ ಬಳಸಿ ವಿವಿಧ ಕಾಯಿಲೆಗಳಿಗೆ ಬಸವಾನಂದ ಸ್ವಾಮೀಜಿ ನಿತ್ಯ ನೂರಾರು ಶಿಬಿರಾರ್ಥಿಗಳಿಗೆ ಮಾರ್ಗದರ್ಶನ ಮಾಡುತ್ತಿದ್ದಾರೆ.

## 19ನೇ ವರ್ಷದ ಮಹಾದಾಸೋಹ: ಏ. 9 ರವರೆಗೆ ನಿರಂತರ ಅನ್ನದಾಸೋಹ
# ಶ್ರೀಶೈಲಂನಲ್ಲಿನ ಮಹಾದಾಸೋಹಕ್ಕೆ ತೆರಳಿದ ಸೇವಾ ಸಮಿತಿ

**ಮಹಾಲಿಂಗಪುರ :** ಯುಗಾದಿ ಜಾತ್ರಾ ಮಹೋತ್ಸವದ ನಿಮಿತ್ಯ ಪಾದಯಾತ್ರೆಯ ಮೂಲಕ ಶ್ರೀಶೈಲಕ್ಕೆ ತೆರಳಿದ ಭಕ್ತರಿಗಾಗಿ ಮಹಾದಾಸೋಹ ನೇರವೇ-ರಿಸುವದಕ್ಕಾಗಿ ಪಟ್ಟಣದ ಶ್ರೀಶೈಲ ಮಲ್ಲಿಕಾರ್ಜುನ ಪಾದಯಾತ್ರೆಯ ಸೇವಾ ಸಮಿತಿ ಅನ್ನದಾಸೋಹ ಹಿಟ್ಟಕ್ಕಿ ತುಂಬಿದ ವಾಹನದೊಂದಿಗೆ ಮಂಗಳವಾರ ರಾತ್ರಿ ಶ್ರೀಶೈಲಕ್ಕೆ ಪ್ರಯಾಣ ಬೆಳೆಸಿದರು.

ಶ್ರೀಶೈಲ ಪಾದಯಾತ್ರೆ ಕೈಗೊಂಡ ಸಕಲ ಭಕ್ತ-ರಿಗಾಗಿ ಮಹಾಲಿಂಗಪುರದ ಭಕ್ತರಿಂದ 19ನೇ ವರ್ಷದ ಮಹಾದಾಸೋಹಕ್ಕಾಗಿ ಪಟ್ಟಣದ ದಾನಿಗಳು, ಭಕ್ತರು ನೀಡಿದ ಸಜ್ಜಕ ರವಾ, ಅಕ್ಕಿ, ಬೆಲ್ಲ, ಬೆಳೆಕಾಳುಗಳು, ಕಾರ, ತರಕಾರಿ ಸೇರಿದಂತೆ ದಾಸೋಹಕ್ಕೆ ಬೇಕಾದ ಸಕಲ ಸಾಮಗ್ರಿಗಳನ್ನು



ದಾನರೂಪದಲ್ಲಿ ನೀಡಿದ್ದಾರೆ. ಅವಶ್ಯಕ ಸಾಮಗ್ರಿಗಳನ್ನು ಸೇವಾ ಸಮಿತಿಯಿಂದಲೂ ಖರೀದಿಸಲಾಗಿದೆ. ಶ್ರೀಶೈಲಂ ಮಹಾಕ್ಷೇತ್ರದ ಛತ್ರಪತಿ ಶಿವಾಜಿ ಭವನದ ಹತ್ತಿರ ಇದೇ ಏಪ್ರಿಲ್ 4ರಿಂದ ಯುಗಾದಿ ಪಾಡ್ಯೆಯ ಏ.9ರವರೆಗೆ 5 ದಿನಗಳ ಕಾಲ ನಿರಂತರ ಮಹಾಸೋಹ ಜರುಗಲಿದೆ. ಈ ಐದು ದಿನಗಳಲ್ಲಿ ಶ್ರೀಶೈಲ ಕ್ಷೇತ್ರಕ್ಕೆ ಬರುವ ಪಾದಯಾತ್ರಿಕರು, ಭಕ್ತರು ಪ್ರಸಾದ ಸ್ವೀಕರಿಸಬೇಕೆಂದು ಶ್ರೀಶೈಲ ಮಲ್ಲಿಕಾರ್ಜುನ ಪಾದಯಾತ್ರೆಯ ಸೇವಾ ಸಮಿತಿ ಅಧ್ಯಕ್ಷ ವಿಜುಗೌಡ ಪಾಟೀಲ ತಿಳಿಸಿದರು.

ಮಹಾಲಿಂಗೇಶ್ವರ ದೇವಸ್ಥಾನದ ಈಶ್ವರ ಮಠಪತಿ, ಪುರಸಭೆ ಸದಸ್ಯರು, ಪುರದ ಹಿರಿಯರಾದ ಯಲ್ಲನಗೌಡ ಪಾಟೀಲ ಆಹಾರ ಸಾಮಗ್ರಿಯ ವಾಹನಕ್ಕೆ ಪೂಜೆ ಸಲ್ಲಿಸಿ ಅನ್ನದಾಸೋಹ ಸೇವಾ ಸಮಿತಿಯವರನ್ನು ಬೀಳ್ಕೊಟ್ಟರು. ಶ್ರೀಶೈಲ ಮಲ್ಲಿಕಾರ್ಜುನ ಪಾದಯಾತ್ರೆಯ ಸೇವಾ ಸಮಿತಿ ಉಪಾಧ್ಯಕ್ಷ ವಿಷ್ಣುಗೌಡ ಪಾಟೀಲ, ಕಾರ್ಯದರ್ಶಿ ಶಂಕರ ಮುರಗೋಡ, ಖಜಾಂಚಿ ಸಿದ್ರಾಮ ದಲಾಲ, ಸದಸ್ಯರಾದ ವಿಜಯ ಕಂಬಾರ, ಶಿವಾನಂದ ಮಠಪತಿ, ಮಹಾಲಿಂಗ ಗುರವ, ವೀರಭದ್ರಯ್ಯ ಮಠಪತಿ, ಮಹಾಲಿಂಗಪ್ಪ ಪರೀಟ, ಯಲ್ಲಪ್ಪ ಹಟ್ಟಿ, ಶೇಖರ ವಗ್ಗರ, ಸದ್ಭಕ್ತರಾದ ಮಹಾಲಿಂಗ ಕೋಟಿ, ಗುರುಲಿಂಗಯ್ಯಾ ಮಠಪತಿ, ರವಿ ಮುಂಡಗನೂರ, ರಮೇಶ ಸಬಕಾಳೆ, ಶಿವುಗೌಡ ಪಾಟೀಲ, ಕೇದಾರಿ ಬಾಳಿಕಾಯಿ, ಆನಂದ ಕಾಗಿ ಸೇರಿದಂತೆ 25ಕ್ಕೂ ಅಧಿಕ ಸದ್ಭಕ್ತರು ಮಹಾದಾಸೋಹದಲ್ಲಿ ಸೇವೆ ಸಲ್ಲಿಸುವದಕ್ಕಾಗಿ ಶ್ರೀಶೈಲಕ್ಕೆ ತೆರಳಿದರು.

# ನದಿಯಲ್ಲಿ ನೀರಿಲ್ಲ, ವಿದ್ಯುತ್ತೂ ಕೊಡದಿಲ್ವಾ: ಗುಡಗುಂಟಿ

**ಜಮಖಂಡಿ :** ಮತಕ್ಷೇತ್ರದ ಕೃಷ್ಣಾನದಿ ತೀರದ ರೈತರ ಪಂಪಸೆಟ್ಟುಗಳಿಗೆ ಕೇವಲ 1 ಗಂಟೆ ವಿದ್ಯುತ ಪೂರೈಕೆ ಡಿಸಿ ಆದ-'ೀಶ ರೈತರಿಗೆ ಸಂಕಷ್ಟ ಎದುರಾಗಿದೆ. ದಿನಕ್ಕೆ ಕನಿಷ್ಠ 5 ಗಂಟೆ ವಿದ್ಯುತ ಪೂರೈಸಬೇಕೆಂದು ಉಪವಿಭಾಗಾಧಿಕಾರಿ ಸಂತೋಷ ಕಾಮಗೌಡ ಅವರಿಗೆ ಜಮಖಂಡಿ ಶಾಸಕ ಜಗದೀಶ ಗುಡಗುಂಟಿ ಮತ್ತು ತೇರದಾಳ ಶಾಸಕ ಸಿದ್ದು ಸವದಿ ಸಹಿತ ರೈತ ಮುಖಂಡರು ಮನವಿ ಸಲ್ಲಿಸಿದರು.

ಶಾಸಕ ಜಗದೀಶ ಗುಡಗುಂಟಿ ಮಾತನಾಡಿ, ಕ್ಷೇತ್ರಕ್ಕೆ ಒಂದು ಗಂಟೆ ತ್ರಿಫೇಸ್ ವಿದ್ಯುತ ಪೂರೈಕೆ ಜಿಲ್ಲಾಧಿಕಾರಿಗಳ ಆದೇಶ ರೈತರಿಗೆ ಅಘಾತ ತಂದಿದೆ. ಹಿಪ್ಪರಗಿ ಜಲಾಶಯದಿದ ಚಿಕ್ಕಪಡಸಲಗಿವರೆಗೆ ನದಿಯಲ್ಲಿ ನೀರಿಲ್ಲ. ಕೊಳವೆ ಬಾವಿಗಳ ನೀರ ಮೇಲೆ ಅವಲಂಬಿತರಾಗಿರುವ ಜನ-ರಿಗೆ ವಿದ್ಯುತ ಇಲ್ಲವಾದರೆ ರೈತರ ಜೀವನ ಹದಗೆಡುತ್ತದೆ. ಬೀಳಗಿ ಮತ್ತು ಬೇಳಗಾವಿ ವಿಭಾಗದ ಅಥಣಿ ತಾಲೂಕಿನಲ್ಲಿ ಈರೀತಿ ಆದೇಶ ಅನ್ವಯವಾಗುತ್ತಿಲ್ಲ. ನಮ್ಮ ಕ್ಷೇತ್ರಕ್ಕೂ ಕನಿಷ್ಠ 5 ಗಂಟೆ ವಿದ್ಯುತ ನೀಡಬೇಂದರು.

ತೇರದಾಳ ಶಾಸಕ ಸಿದ್ದು ಸವದಿ



ಮಾತನಾಡಿ, ಸರ್ಕಾರದ ಬೇಜವಾಬ್ದಾರಿ ರೈತರನ್ನು ಬಲಿತಗೆದುಕೊಳ್ಳುತ್ತಿದೆ. ಇಂತಹ ಕರಾಳ ಕಾನೂನುಗಳು ಹಿಂದೆ ಎಂದಿಗೂ ಇರಲಿಲ್ಲ. ಪೊಲೀಸರು ರೈತರ ವಾಹನ ಹಿಡಿದು ದಂಡ ಹಾಕುವುದು ಹೆಚ್ಚಾಗಿದೆ. ಈ ರೀತಿ ಕೇಸ್ ಹಾಕುವಂತೆ ಪೋಲಿಸ-ರಿಗೆ ಸರ್ಕಾರ ಒತ್ತಾಯಿಸುತ್ತಿದೆ. ಸರ್ಕಾರದ ಹತ್ತಿರ ದುಡ್ಡಿಲ್ಲದ ಕಾರಣ ರೈತರನ್ನು ಸದೆಬಡಿದು ಹಣ ವಸೂಲಿ ಮಾಡಿ ಖಜಾನೆ ತುಂಬುತ್ತಿದ್ದಾರೆ. ವಂಚಿಸುವ ಈ ರೀತಿ ಕಾನೂನುಗಳನ್ನು ಜನ ವಿರೋಧಿ ಕಾಂಗ್ರೆಸ್ ಸರ್ಕಾರ ಮಾಡುತ್ತಿದೆ ಎಂದು ತೀವ್ರವಾಗಿ ಖಂಡಿಸಿದರು. ಉತ್ತರ ಕರ್ನಾಟಕದಲ್ಲಿ ಬರಗಾಲದ ತೀವ್ರತೆ ಹೆಚ್ಚಾಗಿದ್ದು ಕೃಷ್ಣಾನದಿ ಬರಿದಾಗಿದ್ದು ನದಿತೀರದ ಗ್ರಾಮಗಳು, ನಗರಗಳಲ್ಲಿ ಕುಡಿಯುವ ನೀರು ಒದಗಿಸಲು ಸಾಧ್ಯವಾಗುತ್ತಿಲ್ಲ. ಜನ-ಜಾನುವಾರುಗಳಿಗೆ ಕುಡಿಯುವ ನೀರನ್ನು ಪೂರೈಸಲು .ಕೃಷ್ಣಾನದಿಗೆ ಮಹಾರಾಷ್ಟ್ರ ರಾಜ್ಯದ ಕೊಯ್ನಾ ಜಲಾಶಯದಿಂದ 4 ಟಿ.ಎಂ.ಸಿ ನೀರು ಬಿಡುವಂತೆ ನೆರೆ ಮಹಾರಾಷ್ಟ್ರ ಸರ್ಕಾರದ ಮಾತುಕತೆ ನಡೆಸಬೇಕು. ನೀರು ಬಿಡಿಸಲು ಸಾದ್ಯವಾಗದಿದ್ದರೆ ಹಿಡಕಲ ಜಲಾಶಯದಿಂದ 1.2 ಟಿ.ಎಂ.ಸಿ ನೀರು ಕೂಡಲೇ ನೀರು ಹರಿಸುವ ವ್ಯವಸ್ಥೆ ಮಾಡಬೇಕೆಂದರು.

ಉಪವಿಭಾಗಾಧಿಕಾರಿ ಸಂತೋಷ ಕಾಮಗೌಡ ಮಾತನಾಡಿ, ತೀವ್ರ ಬರಗಾಲ ನಿಮಿತ್ತ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ ವತಿಯಿಂದ ಜನ-ಜಾನುವಾರುಗಳಿಗೆ ಕುಡಿಯುವ ನೀರಿನ ಸಲುವಾಗಿ ಪ್ರತಿದಿನ 1ಗಂಟೆ ಮಾತ್ರ ವಿದ್ಯುತ ನೀಡಲು ಆದೇಶ ಹೊರಡಿದ್ದು, ಜಮಖಂಡಿ ಹಾಗೂ ತೇರದಾಳ ಮತಕ್ಷೇತ್ರದ ರೈತರು ಹಾಗೂ ಜನಪ್ರತಿನಿಧಿಗಳು ಹೆಚ್ಚಿನ ಬೇಡಿಕೆಯಿಟ್ಟಿದ್ದಾರೆ. ಎರಡು ದಿನ 4 ಹಂಟೆ ವಿದ್ಯುತ ನೀಡಿ ಒಂದು ದಿನ ನೀಡದೆ ಮತ್ತೆ 4 ಗಂಟೆ ವಿದ್ಯುತ ನೀಡಲು ಚರ್ಚಿಸುತ್ತೇನೆ. ಹಿಡಕಲ್ ಜಲಾಶಯದಿಂದ 1.2 ಟಿಎಂಸಿ ನೀರನ್ನು ಬಿಡುವಂತೆ ಡಿಸಿ ಜೊತೆ ಚರ್ಚೆ ಮಾಡುತ್ತೇನೆಂದು ಭರವಸೆ ನೀಡಿದರು.

ಇದೆ ಸಂದರ್ಭದಲ್ಲಿ ವಿಧಾನ ಪರಿಷತ ಮಾಜಿ ಸದಸ್ಯ ಜಿ.ಎಸ್.ನ್ಯಾಮಗೌಡ, ಅಜೇಯ ಕಡಪಟ್ಟಿ, ಅರವಿಂದಗೌಡ ಪಾಟೀಲ, ಎಂ.ಬಿ.ನಾಮಗೌಡ, ಬಸವರಾಜ ಬಿರಾದಾರ, ಗಣೇಶ ಶಿರಗಣ್ಣವರ, ಬಸಲಿಂಗ ಹಿಪ್ಪರಗಿ, ಭೀಮಶಿ ರಾಫಾ, ಶಂಕರ ಕಾಳೆ, ಪಾಲಬಾವಿ ಸಹಿತ ಹಲವರು ಇದ್ದರು.

## ಅಭಿಮತ
# ಲೋಕಸಮರ: ಒಳ್ಳೆಯವರನ್ನು ಕಲೆ ಹಾಕಬೇಕಾಗಿದೆ



**ರಾಯಬಾಗ :** ಸಾರ್ವತ್ರಿಕ ಲೋಕಸಭೆಗೆ ಚುನಾವಣೆ ನಡೆಯುತ್ತಿರುವ ಈ ಸಂದರ್ಭದಲ್ಲಿ ಪ್ರಜ್ಞಾವಂತ ಎನಿಸಿಕೊಂಡ ಮತದಾರರು ಅಭ್ಯರ್ಥಿಯ ಹಣ ಹೆಂಡ ಆಸೆ ಆಮಿಷಗಳಿಗೆ ಒಳಗಾಗದೆ ಕ್ಷೇತ್ರಕ್ಕೆ ಪ್ರಾಮಾಣಿಕವಾಗಿ ಕಾರ್ಯ ಮಾಡುವ ಸೂಕ್ತ ಹಾಗೂ ನಿಷ್ಕಳಂಕ ವ್ಯಕ್ತಿಯನ್ನು ಸಂಸತ್ತಿಗೆ ಆರಿಸಿ ಕಳಿಸುವ ಮೂಲಕ ಈ ಸಾರಿ ಒಳ್ಳೆಯವರನ್ನು ಕಲೆ ಹಾಕಬೇಕಾಗಿದೆ. ನೋಟು ಕೊಟ್ಟವರಿಗೆ ವೋಟು ಎಂಬ ಹೇಳಿಕೆಯನ್ನು ಗಾಳಿಗೆ ತೂರಿ ಸುಸಂಸ್ಕೃತ ಹಿನ್ನೆಲೆ ಇರುವ ಅಭ್ಯರ್ಥಿಗೆ ತಮ್ಮ ಅಮೂಲ್ಯ ಮತವನ್ನು ಹಾಕಿ ಪ್ರಬುದ್ಧತೆಯನ್ನು ಮತದಾರ ಮೆರೆಯಬೇಕು.ಸ್ಥಳೀಯ ಮೂಲ ಸೌಕರ್ಯ,ಪ್ರಮುಖ ಮೂಲಭೂತ ಸಮಸ್ಯೆಗಳನ್ನು ಬಗೆಹರಿಸುವ ಅಭ್ಯರ್ಥಿಯನ್ನು ಆಯ್ಕೆ ಮಾಡಬೇಕಾಗಿದೆ.ಮುಖ್ಯವಾಗಿ ಪೂರ್ವಾಗ್ರಹಪೀಡಿತಕ್ಕೆ ಒಳಗಾಗದೆ ಸೂಕ್ತ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಒಂದು ನೈತಿಕ ಜವಾಬ್ದಾರಿ ಮತದಾರನ ಮೇಲಿದೆ. ಈ ಮೂಲಕ ತನ್ನ ಕ್ಷೇತ್ರ ಉತ್ತರೋತ್ತರ ಪ್ರಗತಿ ಕಾಣಲು ಸಾಧ್ಯವಾದೀತು.

–ಡಾ. ಜಯವೀರ ಎ.ಕೆ.

# ಕಲ್ಲೋಳಿ ಬಸವೇಶ್ವರ ಸೊಸಾಯಿಟಿಗೆ ರೂ.3.88 ಕೋಟಿ ಲಾಭ



**ಮೂಡಲಗಿ :** ತಾಲ್ಲೂಕಿನ ಶ್ರೀ ಬಸವೇಶ್ವರ ಸೌಹಾರ್ದ ಸಹಕಾರಿ ಸಂಘವು ಪ್ರಸಕ್ತಆರ್ಥಿಕ ವರ್ಷದಕೊನೆಯಲ್ಲಿ ರೂ.3.88 ಕೋಟಿ ಲಾಭವನ್ನು ಗಳಿಸಿ ಪ್ರಗತಿಯಲ್ಲಿ ಮುನ್ನೆಡಯುತ್ತಲಿದೆ' ಎಂದು ಸಂಘದಅಧ್ಯಕ್ಷ ಬಾಳಪ್ಪ ಬಿ.ಬೆಳಕೂಡ ಅವರು ತಿಳಿಸಿದರು.

ಸಂಘದ ಪ್ರಗತಿ ಬಗ್ಗೆ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ ಅವರು ಸದ್ಯ ಸಂಘವು ರೂ. 78.31 ಕೋಟಿದುಡಿಯುವ ಬಂಡವಾಳ, ರೂ. 78.76 ಲಕ್ಷ ಶೇರು ಹಣ, ರೂ. 19.63 ಕೋಟಿ ನಿಧಿಗಳು, ರೂ. 57.88 ಕೋಟಿ ಠೇವುಗಳು, ರೂ.11.56 ಕೋಟಿಗುಂತಾವಣಿ ಹೊಂದಿದೆಎಂದರು.

ಸಂಘವು ವಿವಿಧ ಕ್ಷೇತ್ರಗಳ ಜನರಿಗೆ ರೂ.65.39 ಕೋಟಿ ಸಾಲವನ್ನು ನೀಡಿದ್ದು, ಶೇ.100ರಷ್ಟು ಸಾಲ ವಸೂಲಾತಿ ಮಾಡಿದೆ.ಅಡಿಟ್‌ದಲ್ಲಿ 'ಅ' ಶ್ರೇಣಿಯನ್ನು ಹೊಂದಿದೆ.ಸಂಘವು ರೂ.205 ಕೋಟಿಒಟ್ಟು ವಹಿವಾಟು ಮಾಡುವ ಮೂಲಕ ರಾಜ್ಯದ ಸಹಕಾರಿಕ್ಷೇತ್ರದಲ್ಲಿ ಗಮನಸೆಳೆದಿದೆ ಎಂದರು. ಎಸ್ಎಸ್ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿಅತೀಹೆಚ್ಚು ಅಂಕಗಳನ್ನು ಪಡೆದುಕೊಳ್ಳುವ ಸೊಸಾಯಿಟಿಯ ಸದಸ್ಯರ ಮಕ್ಕಳಿಗೆ ನಗದುರೂಪದಲ್ಲಿ 'ಪ್ರತಿಭಾ ಪುರಸ್ಕಾರ' ನೀಡಲಾಗುತ್ತಿದೆಎಂದುಬಾಳಪ್ಪ ಬೆಳಕೂಡ ಅವರು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಸೊಸಾಯಿಟಿಯ ಉಪಾಧ್ಯಕ್ಷ ಶಿವರುದ್ರ ಬಿ. ಪಾಟೀಲ, ನಿರ್ದೇಶಕರಾದ ಬಸಗೌಡ ಪಾಟೀಲ, ಬಸವಣ್ಣೆಪ್ಪ ಗೋರೋಶಿ, ಮಲ್ಲಪ್ಪಖಾನಾಪೂರ, ರಾಮಪ್ಪದಬಾಡಿ, ಹಣಮಂತ ಪರಕನಟ್ಟಿ, ಸುಭಾಸಖಾನಾಪೂರ, ಬಸಪ್ಪ ಹೆಬ್ಬಾಳ, ದುಂಡವ್ವಾಕಡಾಡಿ, ಲಕ್ಷ್ಮೀಬಾಯಿಕಂಕಣವಾಡಿ, ಪ್ರಕಾಶ ಕಲಾಲ, ಮಹ್ಮದಶಫಿ ಮೋಕಾಶಿ, ಕಲ್ಲೋಳೆಪ್ಪ ತೆಳಗಡೆ ಹಾಗೂ ಪ್ರಧಾನ ವ್ಯವಸ್ಥಾಪ ಹಣಮಂತ ಖಾನಗೌಡ್ರ ಇದ್ದರು.

# ಕೆಪಿಸಿಸಿ ಉಪಾಧ್ಯಕ್ಷರಾಗಿ ಮಾಜಿ ಶಾಸಕ ನ್ಯಾಮಗೌಡ ಆಯ್ಕೆ



**ಜಮಖಂಡಿ :** ನಗರದ ಮಾಜಿ ಶಾಸಕ ಆನಂದ ಸಿದ್ದು ನ್ಯಾಮಗೌಡ ಅವರನ್ನು ರಾಜ್ಯ ಕರ್ನಾಟಕ ಪ್ರದೇಶ ಕಾಂಗ್ರೆಸ್ ಕಮಿಟಿಯ ಉಪಾಧ್ಯಕ್ಷರಾಗಿ ಆಯ್ಕೆಗೊಂಡಿದ್ದಾರೆ.

ಕಾಂಗ್ರೆಸ್ ಪಕ್ಷದ ವರ್ಧಮಾನ ನ್ಯಾಮಗೌಡ, ಕಲ್ಲಪ್ಪ ಗಿರಡ್ಡಿ, ನ್ಯಾಯವಾದಿ ಎನ್.ಎಸ್. ದೇವರವರ, ನಗರ ಯೋಜನಾ ಪ್ರಾಧಿಕಾರ ಅಧ್ಯಕ್ಷ ಅನ್ವರ ಮೋಮಿನ,ನಗರಸಭೆಸದಸ್ಯರಾದ ಸಿದ್ದು ಮೀಸಿ, ದಾನೇಶ ಘಾಟಗೆ, ಪರಮಾನಂದ ಗವರೋಜಿ, ಮುಬಾರಕ ಅಪರಾಧ ಸಹಿತ ಕಾಂಗ್ರೆಸ್ ಪಕ್ಷದ ಮುಖಂಡರು, ಕಾರ್ಯಕರ್ತರು, ಯುವಕರು ಅಭಿಮಾನಿಗಳು ಸಂತಸ ವ್ಯಕ್ತಪಡಿಸಿದ್ದಾರೆ.

## ನಗರಸಭೆ: ಕುಡಿಯುವ ನೀರಿಗಾಗಿ ಹೆಲ್ಪಲೈನ್

**ಬಾಗಲಕೋಟೆ :** ನಗರದಲ್ಲಿ ಬಿಸಿಲಿನ ತಾಪ ಹೆಚ್ಚಾಗಿ ಇರುವದ-ರಿಂದ ನದಿಯಲ್ಲಿ ನೀರು ಬತ್ತುತ್ತಿದೆ. ಕೊಳವೆಭಾವಿಗಳ ನೀರಿನ ಮಟ್ಟ ಕಡಿಮೆಯಾಗಿ ನೀರು ಸರಬರಾಜು ಮಾಡುವಲ್ಲಿ ತೊಂದರೆ ಆಗುವ ಸಂಭವವಿದೆ.ಇಂತಹಸಂದರ್ಭದಲ್ಲಿನಗರಸಭೆಹೆಲ್ಪಲೈನ್‌ನಂ.08354-235011, ಕಿರಿಯ ಅಭಿಯಂತರ ನವೀನ ಖಾಜಿ (9740102827), ಸ.ಕಾ.ಅ ಬಿ.ಎಸ್.ಹಾಲವರ ( 7019276071) ಹಾಗೂ ಮೇಲ್ವಿಚಾರಕ ಪರಶುರಾಮ ತಳವಾರ (7338064313)ಗೆ ಸಂಪರ್ಕಿಸುವಂತೆ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕಲೆ, ಕಲಾವಿದರನ್ನು ಬೆಳಸುವದು ನಮ್ಮ ಸಂಸ್ಕೃತಿ: ಡಾ. ದಡ್ಡಿ



**ಜಮಖಂಡಿ :** ನಗರದ ಮೈಗೂರ ರಸ್ತೆಯಲ್ಲಿರುವ ದಡ್ಡಿ ಆಸ್ಪತ್ರೆಯಲ್ಲಿ ಆವರಣದಲ್ಲಿ ಬಹರೂಪಿ ಕಲಾವಿದವರನ್ನು ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ, ನಾಡೋಜ ಡಾ. ಹೆಚ್.ಜಿ.ದಡ್ಡಿ ಅವರು ಸನ್ಮಾನಿಸಿದರು.

ನಂತರ ಮಾತನಾಡಿದ ಅವರು, ಪ್ರಾಚೀನ ಕಲೆಗಳು ನಶಿಸಿ ಹೋಗುತ್ತಿರುವ ಇಂದಿನ ದಿನಮಾನದಲ್ಲಿ ಬಹರೂಪಿ ಕಲಾವಿದರು ತಮ್ಮ ಕಲಾ ಪರಂಪರೆಯನ್ನು ಮುಂದುಬರೆಸಿಕೊಂಡು ಬರುತ್ತಿರುವದು ಹೆಮ್ಮೆಯ ಸಂಗತಿಯಾಗಿದೆ. ಕಲೆಗಳನ್ನು ನಾವು ಪ್ರೀತಿಸಿದರೇ ಮಾತ್ರ ಕಲಾವಿದರು ಜೀವಂತವಾಗಿರಲು ಸಾಧ್ಯ. ಕಲೆಗಳನ್ನು ಮತ್ತು ಕಲಾವಿದರನ್ನು ಬೆಳಸುವದು ನಮ್ಮ ಸಂಸ್ಕೃತಿಯಾಗಬೇಕು ಎಂದರು.

ತಾವರಗಿರಿ ಬಹುರೂಪಿ ಜಾನಪದ ಕಲಾವಿದರಾದ ರೇಣುಕಪ್ಪ ಹುನ್ನೂರ, ದುರ್ಗಪ್ಪ ಶಾಮಣ್ಣ, ಭದ-ರಿನಾಥ ಅವರು ರಾಮಾಯಣ, ಮಹಾಭಾರತದ ಸನ್ನಿವೇಶಗಳನ್ನು ಅಭಿನಯಿಸುವ ಮೂಲಕ ಶರಣರ ವಚನ, ತತ್ವ ಪದಗಳನ್ನು ಹಾಡಿದರು.

ಇದೇ ಸಂದರ್ಭದಲ್ಲಿ ನ್ಯಾಯವಾದಿ ರವೀಂದ್ರ ಹಳಿಂಗಳಿ, ಎಸ್.ಎಸ್.ದೊಡಮನಿ, ಹಿರಿಯ ಪತ್ರಕರ್ತ ಮಲ್ಲಿಕಾರ್ಜುನ ಹೆಗ್ಗಳಗಿ ಸಹಿತ ಹಲವರು ಇದ್ದರು.

# ಕಲ್ಲೋಳಿ ಶ್ರೀ ಮಹಾಲಕ್ಷ್ಮೀ ಸಹಕಾರಿಗೆ ರೂ 2.51 ಕೋಟಿ ಲಾಭ



**ಮೂಡಲಗಿ :** ತಾಲೂಕಿನ ಕಲ್ಲೋಳಿ ಪಟ್ಟಣದ ಶ್ರೀ ಮಹಾಲಕ್ಷ್ಮೀ ಸೌಹಾರ್ದ ಸಹಕಾರಿ ಸಂಘವು ಕಳೇದ ಆರ್ಥಿಕ ವರ್ಷದಲ್ಲಿ 2.51 ಕೋಟಿ ರೂ ಲಾಭ ಗಳಿಸಿದೆ ಎಂದು ಸಹಕಾರಿಯ ಅಧ್ಯಕ್ಷ ಹಾಗೂ ರಾಜ್ಯಸಭಾ ಸಂಸದಈರಣ್ಣಕಡಾಡಿಹೇಳಿದರು.

ಗುರುವಾರ ಸಹಕಾರಿಯ ಸಭಾಭವನದಲ್ಲಿ ಸುದ್ದಿಗೋಷ್ಠಿಯಲ್ಲಿಮಾತನಾಡಿದಅವರು,ಸಂಘದಲ್ಲಿ 12612ಸದಸ್ಯರಿದ್ದು,ರೂ20.12ಲಕ್ಷಶೇರುಬಂಡವಾಳ ಹಾಗೂ ರೂ 6.96 ಕೋಟಿ ಕಾಯ್ದಿಟ್ಟ ನಿಧಿಯಿದೆ. ಹಣಕಾಸು ವರ್ಷದಲ್ಲಿ ರೂ 71.10 ಕೋಟಿ ಠೇವು ಸಂಗ್ರವಾಗಿದೆ.ಸಹಕಾರಿಯಿಂದ ಇದು ವರೆಗೆ ರೂ 66.71ಕೋಟಿಸಾಲವಿತರಿಸಲಾಗಿದೆ.

8.89 ಕೋಟಿ ರೂಗಳನ್ನು ಬ್ಯಾಂಕ ಮತ್ತು ಇನ್ನಿತರ ಸಂಘಗಳಲ್ಲಿಗುಂತಾವಣೆಮಾಡಲಾಗಿದ್ದು,ರೂ78.10 ಕೋಟಿದುಡಿಯುವಬಂಡವಾಳಹೊಂದಿದೆ,ರೂ318 ಕೋಟಿ ವಹಿವಾಟು ಹೊಂದಿದೆ ಎಂದರು.ಸಹಕಾ-ರಿಯ ಗ್ರಾಹಕರಿಗೆ ಮಹಾಲಕ್ಷ್ಮೀ ಕಿರು ಸಾಲ ಯೋಜನೆ ಸೇರಿದಂತೆ ಅನೇಕ ಸೌಲಭ್ಯಗಳನ್ನು ನೀಡಲಾಗಿದೆ ಎಂದರಲ್ಲದೇ ಕಲ್ಲೋಳಿಯಲ್ಲಿ ನಿರ್ಮಿಸುತ್ತಿರುವ ಪ್ರಧಾನ ಕಛೇರಿಯು ಮುಕ್ತಾಯ ಹಂತಕ್ಕೆ ತಲುಪಿದ್ದು ಶೀಘ್ರದಲ್ಲಿಯೇಲೋಕಾರ್ಪಣೆಗೊಳ್ಳಲಿದೆಎಂದರು.

ಸಹಕಾರಿಯ ಹಾಗೂ ಬಿಡಿಸಿಸಿ ಬ್ಯಾಂಕ ನಿರ್ದೇಶಕ ಸತೀಶಕಡಾಡಿ,ಉಪಾಧ್ಯಕ್ಷಶ್ರೀಶೈಲತುಪ್ಪದ,ನಿರ್ದೇಶಕರಾದ ಬಾಳಪ್ಪ ಸಂಗಟಿ,ಪರಪ್ಪ ಮಳವಾಡ,ಸಹದೇವ ಹೆಬ್ಬಾಳ,ಶಿವಗೊಂಡ ವ್ಯಾಪಾರಿ,ಶಿವಪ್ಪ ಗೊಸಬಾಳ,ಸಿದ್ದಪ್ಪ ಹೆಬ್ಬಾಳ,ಮಲ್ಲಿಕಾರ್ಜುನ ಹುಲೆನ್ನವರ,ಸೋಮಲಿಂಗ ಹಡಿಗನಾಳ,ಮಾರುತಿ ಮಕ್ಕಳಗೇರಿ,ಬೆಟಗೇರಿ ಶಾಖೆಯ ಸಲಹಾ ಸಮಿತಿ ಅಧ್ಯಕ್ಷ ಈರಪ್ಪ ದೇಯನ್ನವರ,ಘಟಪ್ರಭಾ ಶಾಖೆಯ ರಾಜು ಕತ್ತಿ,ಪ್ರಧಾನ ವ್ಯವಸ್ಥಾಪಕ ಹನಮಂತ ಕಲಕುಟ್ರಿ, ಶಾಖಾ ವ್ಯವಸ್ಥಾಪಕರಾದ ಪರಪ್ಪ ಗಿರೆಣ್ಣವರ, ಶಂಕರ ಕೌಜಲಗಿಇದ್ದರು.

# ಕಾಂಗ್ರೆಸ್ ಆರೋಪಿಗಳನ್ನು ಬಚಾವ್ ಮಾಡುತ್ತಿದೆ: ಡಾ.ತುಂಗಳ

**ಜಮಖಂಡಿ :** ಕಾಂಗ್ರೆಸ್ ಆಡಳಿತದಲ್ಲಿ ಮಹಿಳೆಯರಿಗೆ ರಕ್ಷಣೆ ಇಲ್ಲವಾಗಿದೆ. ಮಹಿಳೆಯರ ಮೇಲೆ ಅವ್ಯಾಹತವಾಗಿ ದೌರ್ಜನ್ಯಆಸಿಡ್ಯದಾಳಿ,ಅತ್ಯಾಚಾರಪ್ರಕರಣ ನಡೆದರೂ ಯಾವುದೇ ಕ್ರಮ ಜರುಗಿಸುತ್ತಿಲ್ಲ. ಆರೋಪಿಗಳನ್ನು ಬಚಾವ್ ಮಾಡುವ ಕೆಲಸದಲ್ಲಿರಾಜ್ಯಸರಕಾರತೊಡಗಿಕೊಂಡಿದೆ ಎಂದು ಲೋಕಸಭಾ ಚುನಾವಣಾ ಮಹಿಳಾ ಕಮಿಟಿ ಮುಖ್ಯಸ್ಥೆ ಡಾ.ವಿಜಯಲಕ್ಷ್ಮೀ ತುಂಗಳಆಕ್ರೋಶವ್ಯಕ್ತಪಡಿಸಿದರು.

ನಗರದ ಗೋಪಾಲ ಚೆಂಬರ್‌ನಲ್ಲಿರುವ ಸಭಾಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಕೇವಲ ಬಾಯಲ್ಲಿ ಮಾತ್ರ 3 ಮಹಿಳೆಯರಿಗೆ ಮಾತ್ರ ಗೌರವಿಸುತ್ತಾರೆ. ಉಡಪಿ ಘಟನೆ ಸೇರಿದಂತೆ ವಿವಿಧ ಪ್ರಕರಣದಲ್ಲಿ ಮಹಿಳೆಯರ ಮೇಲೆ ನಡೆದ ದೌರ್ಜನ್ಯಗಳಿಗೆ ಯಾವುದೇ ರೀತಿಯ ಕಠಿಣ ಕ್ರಮ ಕ್ರಮ ಕೈಗೊಂಡಿರುವದಿಲ್ಲ ಎಂದು ಆರೋಪಿಸಿದರು.

ಶಕ್ತಿಯೋಜನೆಯಿಂದಮಹಿಳೆಯರಿಗೆಲಾಭ ಆಗಿದ್ದು, ಅದಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿಗೆ ನಷ್ಟವಾಗಿದೆ. ಶಕ್ತಿ ಯೋಜನೆ ಜಾರಿಯಿಂದ



ಕಾಲೇಜು ವಿದ್ಯಾರ್ಥಿಗಳಿಗೆ ಕಾಲೇ-ಜಿಗೆ ತೆರಳಲು ಬಸ್ಸಿನ ತೊಂದರೆಯಿಂದ ಅಧ್ಯಯನಕ್ಕೆ ತೊಂದರೆಯಾಗಿದೆ. ಮಹಿಳೆಯರನ್ನ ಅವಲಂಬಿತ ಉದ್ಯೋಗಗಳು ಸ್ಥಗಿತಗೊಳಗಳ್ಳುತ್ತಿವೆ. ಕುಟುಂಬದಲ್ಲಿ ಕಲಹ ಹೆಚ್ಚಾಗುತ್ತಿದೆ. ಪುರುಷರು ಮದ್ಯ ವ್ಯಸನಿಗಳಾಗಿ ಗೃಹಲಕ್ಷ್ಮೀ ಯೋಜನೆ ಹಣ ಮನೆ ಯಜಮಾನಿಗೆ ತಲುಪುತ್ತಿಲ್ಲ. ಸರ್ಕಾರದ ಗ್ಯಾರಂಟಿ ಯೋಜನೆಗಳು ಉಪಯೋಗಕ್ಕಿಂತ ದುರಪಯೋಗ ಹೆಚ್ಚಾಗಿದೆ. ಇತಂಹ ಯೋಜನೆಗಳಿಂದ ರಾಜ್ಯದ ಬೊಕ್ಕಸ ಖಾಲಿಯಾಗುತ್ತಿದೆ. ದಿನಸಿ ವಸ್ತುಗಳ ಬೆಲೆ ಏರಿಕೆಯಾಗಿದೆ. ಉಚಿತವಾಗಿ .ವಿದ್ಯುತ್ ನೀಡಿದ್ದು,. ಆದರೆ 200 ಯೂನಿಟಗಿಂತ ಹೆಚ್ಚಿಗೆ ಬಳಕೆ ಮಾಡುವವರು ದುಪ್ಪಟ್ಟು ಹಣ ಭರಿಸಬೇಕಾಗಿದೆಎಂದರು.

ಪ್ರಧಾನಿ ನರೇಂದ್ರ ಮೋದಿ ಮಹಿಳೆಯರ ಆರೋಗ್ಯ ಮತ್ತು ಸುರಕ್ಷತೆಗಾಗಿ ಆರೋಗ್ಯ ಕಾರ್ಡ, ಉಜ್ವಲ ಗ್ಯಾಸ್, ಹತ್ತು ಕೋಟಿ ಶೌಚಾಲಯ ನಿರ್ಮಾಣ, ಶುದ್ಧ ಕುಡಿಯುವ ನೀರು ಪೂರೈಕೆ, ಗ್ರಾಮೀಣ ಭಾಗದಲ್ಲಿ ಜಲಜೀವನ ಮಷಿನ್ ಮೂಲಕ ಮನೆಮನೆಗೆ ನೀರು ಪೂರೈಕೆ ಜಾರಿಗೆ ತಂದಿದೆ. ಬಡವ-ರಿಗಾಗಿ ಜನೌಷಧಿ ಕೇಂದ್ರ, ಮಹಿಳಾ ಸಬಲಿಕರಣ, ಭೇಟಿ ಪಡಾವೋ ಮೂಲಕ ಮಹಿಳೆಯರಿಗೆ 5 ಲಕ್ಷ ಸಾಲ ವಿತರಣೆ ಸಹಿತ ಮಹಿಳೆಯರಿಗೆ ಶೇ.33 ಮೀಸಲಾತಿ ಜಾರಿಗೆ ಸಹಿತ ಹತ್ತು ಹಲವಾರು ಯೋಜನೆಗಳನ್ನು ಜಾರಿಗೊಳಿಸಿದ್ದಾರೆ ಎಂದರು. ಸಂಸದ ಪಿ.ಸಿ.ಗದ್ದಿಗೌಡರ ಒಂದು ಕಪ್ಪುಚುಕ್ಕೆಯಿಲ್ಲದ ಸರಳ ಸಜ್ಜನ ರಾಜಕಾರಣಿಯಾಗಿ ಗುರುತಿಸಿಕೊಂಡಿದ್ದು, ಅವರು ಮಾತಿಗಿಂತ ಅಭಿವೃದ್ಧಿ ಕಾರ್ಯಗಳನ್ನು ಮಾಡಿ ತೋ-ರಿಸಿದ್ದಾರೆ. ಪ್ರತಿ ಗ್ರಾಮ ನಗರಪ್ರದೇಶಗಳಲ್ಲಿ ಬಿಜೆಪಿ ಅಭ್ಯರ್ಥಿಗೆ ಅಪಾರ ಬೆಂಬಲ ವ್ಯಕ್ತವಾಗುತ್ತಿದೆ. ಈ ಬಾರಿಯೂ ಹೆಚ್ಚಿನ ಅಂತರದಿಂದ ಗೆಲುವು ಸಾಧಿಸಲಿದ್ದಾರೆ ಎಂದರು. ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ಮಹಿಳಾ ಮೋರ್ಚಾ ಅಧ್ಯಕ್ಷೆ ಸವಿತಾ ಹೊಸೂರ, ಗೀತಾ ಸೂರ್ಯವಂಶಿ, ನಗರಸಭೆಸದಸ್ಯೆಪೂಜಾವಾಳ್ವೇಕರ,ಶಿವಯ್ಯ ಹಿರೇಮಠಸಹಿತಹಲವರುಇದ್ದರು.

"SIHI KAHI" Kannada Daily Morning, Editor, Owner, Publisher, Printer by MARUTI BASAVANTAPPA HOASAMANI Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at SUDIN PRINTERS, Sector No. 33, Shop No. 38 & 40, Opp. Ambedkar Bhavan, NAVANAGAR, BAGALKOT-587 101. Dist : Bagalkot, Karnataka State